
ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಫೆಬ್ರವರಿ 2022 ಮಾಸ ಪತ್ರಿಕೆ

ಸಂಪುಟ/Volume : 44
ಸಂಚಿಕೆ/Issue : 5
ಪುಟ/Pages : 12
ಬೆಲೆ/Price : ₹ 10/–

**Akhila Karnataka Shikshaka Samachar | February 2022 | Monthly**



“ಭಾರತಮಾತೆಯ ಬಂಧ
ವಿಮೋಚನೆಗಾಗಿ ಪ್ರಾಣಗಳನ್ನು
ಅರ್ಪಿಸುವ ಮಹದವಕಾಶ, ಎಲ್ಲರಿಗೂ,
ಯಾವಾಗಲೂ ಲಭಿಸುವುದಿಲ್ಲ.
ಗುಲಾಮರಂತೆ ನೂರು ವರ್ಷ
ಬದುಕಿರುವುದಕ್ಕಿಂತ ರಣರಂಗ ಪ್ರವೇಶ
ಮಾಡಿ, ಮೂರು ದಿನ ಹೋರಾಡಿ,
ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ
ಸತ್ತು ವೀರಸ್ವರ್ಗ ಸೇರೋಣ,
ವೀರ ಯೋಧರೇ !
ನೀವೆಲ್ಲ ನನಗೆ ನಿಮ್ಮ ರಕ್ತ ಕೊಡಿ !
ನಿಮಗೆಲ್ಲ ನಾನು
ಸ್ವತಂತ್ರ ಭಾರತವನ್ನು ಕೊಡುತ್ತೇನೆ !”

**ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ
125ನೇ ಜನ್ಮದಿನಾಚರಣೆ
ಅಂಗವಾಗಿ ಇಂಡಿಯಾ ಗೇಟ್‌ನಲ್ಲಿ
ಹೊಲೊಗ್ರಾಮ್ ಪ್ರತಿಮೆ ಅನಾವರಣ**

A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

ನಮ್ಮೆಲ್ಲಾ ಪ್ರೀತಿಯ ಓದುಗರಿಗೆ ಫೆಬ್ರವರಿ 28ರಂದು ಆಚರಿಸುವ ರಾಷ್ಟ್ರೀಯ ವಿಜ್ಞಾನ ದಿನದ ಶುಭಾಶಯಗಳು.

ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸುವ ಸಮಯದಲ್ಲಿ ನಾವುಗಳು ವಿಜ್ಞಾನ ಬೋಧನೆ ಮತ್ತು ಕಲಿಕೆಯ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳೋಣವೇ?

ಶಾಲಾ ಮಕ್ಕಳಿಗೆ ಗಣಿತ ಮತ್ತು ವಿಜ್ಞಾನ ವಿಷಯಗಳೆಂದರೆ ಕಬ್ಬಿಣದ ಕಡಲೆಯೆನಿಸುವುದು ಏಕೆ? ಹಾಗೆ ಯೋಚಿಸಿದರೆ ಬೇರೆಲ್ಲಾ ವಿಷಯಗಳಿಗಿಂತ ಜೀವಕ್ಕೆ ಹಾಗೂ ಜೀವನಕ್ಕೆ ಹತ್ತಿರವಾಗಿರುವುದು ಈ ಎರಡು ವಿಷಯಗಳೇ. ಆದರೂ ಮಕ್ಕಳಿಗೇಕೆ ಈ ಅನುಭವ? ಶಿಕ್ಷಕರಾದ ನಾವು ಬೋಧಿಸುವಲ್ಲಿಯೇ ವಿಜ್ಞಾನ ವಿಷಯವನ್ನು ಕಬ್ಬಿಣದ ಕಡಲೆಯಾಗಿ ಮಾಡುತ್ತಿದ್ದೇವೆಯೇ? ಅಥವಾ ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳುವುದರಲ್ಲಿ ವಿಷಯವನ್ನು ಕಬ್ಬಿಣದ ಕಡಲೆ ಮಾಡಿಕೊಳ್ಳುತ್ತಿದ್ದಾರೆಯೇ? ಇವೆರೆಡರಲ್ಲಿ ಮೊದಲನೇ ಭಾಗವನ್ನು ನಾವೀಗ ನೋಡೋಣ. ವಿಜ್ಞಾನವೆಂದರೆ ವಿಶೇಷವಾದ ಜ್ಞಾನ ಎಂದಲ್ಲವೇ ಅರ್ಥ. ವಿಶೇಷವಾದ ಜ್ಞಾನವನ್ನು ನೀಡುವಾಗ ನಾವು ವಿಶೇಷವಾಗಿ ಯೋಚಿಸಿ ಬೋಧನೆ ಮಾಡಬಹುದಲ್ಲವೇ? ಹಾಗಿದ್ದರೆ ಹೇಗೆ? ವಿಜ್ಞಾನದಲ್ಲಿರುವ ಎಲ್ಲಾ ಹೆಚ್ಚು ವಿಷಯಗಳು ಜೀವನಕ್ಕೆ ಹತ್ತಿರವಾಗಿರುವಾಗ ನಾವು ಆ ವಿಷಯಗಳನ್ನು ನಿತ್ಯಜೀವನಕ್ಕೆ ಸಂಬಂಧೀಕರಿಸುತ್ತಿದ್ದೇವೆಯೇ ಎಂಬುದನ್ನು ಯೋಚಿಸಬೇಕು. ಉದಾಹರಣೆಗೆ ನಾವು ಆಮ್ಲ–ಪ್ರತ್ಯಾಮ್ಲಗಳ ಬಗ್ಗೆ ಬೋಧನೆ ಮಾಡುವಾಗ ಪ್ರತಿನಿತ್ಯ ಜೀವನದಲ್ಲಿ ನಾವು ಆಮ್ಲವನ್ನು ಎಲ್ಲೆಲ್ಲಿ ನೋಡಬಹುದು. ಮೊಸರು, ಲಿಂಬೆರಸ, ಕಿತ್ತಳೆ ರಸಗಳನ್ನು ಉದಾಹರಣೆಯಾಗಿ ಕೊಟ್ಟು ಇವೆಲ್ಲಾ ಏಕೆ ಆಮ್ಲಗಳು ಎಂದು ಹೇಳಬಹುದು. ಹುಳಿ ರುಚಿಯನ್ನು ಹೊಂದಿರುವುಗಳನ್ನು ಆಮ್ಲಗಳೆಂದು ಕರೆಯಬಹುದು ಎಂದು ಹೇಳಿ, ವಿದ್ಯಾರ್ಥಿಗಳಿಗೆ ಅವರ ದಿನನಿತ್ಯದಲ್ಲಿ ಬಳಸುವ ಆಮ್ಲಗಳನ್ನು ಬರೆದುಕೊಂಡು ಬರಲು ತಿಳಿಸಬಹುದಲ್ಲವೇ? ಇದು ಒಂದು ಉದಾಹರಣೆ ಅಷ್ಟೇ. ಇಂತಹ ಅನೇಕ ಉದಾಹರಣೆಗಳ ಮೂಲಕ ವಿಜ್ಞಾನವನ್ನು ಸರಳೀಕರಿಸಬಹುದು ಮತ್ತು ನಿತ್ಯ ಜೀವನಕ್ಕೆ ಹತ್ತಿರ ತರಬಹುದು. ಇನ್ನು ಎರಡನೇ ಭಾಗವನ್ನು ನೋಡುವುದಾದರೆ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಮೊದಲಿನಿಂದಲೂ ಗಣಿತ ಮತ್ತು ವಿಜ್ಞಾನ ಎರಡು ವಿಷಯಗಳು ಬಹಳ ಕಷ್ಟ, ಪ್ರಾರಂಭದ ಹಂತದಿಂದಲೇ ಸರಿಯಾಗಿ ಅರ್ಥ ಮಾಡಿಕೊಳ್ಳಿ ಎಂಬ ವಾಕ್ಯದೊಂದಿಗೆ ಶಿಕ್ಷಕರಾದ ನಾವೇ ವಿದ್ಯಾರ್ಥಿಗಳಿಗೆ ಪ್ರಾರಂಭದ ಹಂತದಿಂದಲೂ ಈ ಎರಡೂ ವಿಷಯಗಳು ಕಷ್ಟಕರವಾದವುಗಳು ಎಂಬುದನ್ನು ತಲೆಗೆ ತುಂಬುತ್ತಿದ್ದೇವೆ. ಇದರ ಬದಲಿಗೆ ವಿಜ್ಞಾನ ವಿಷಯ ನಮ್ಮ ಜೀವನಕ್ಕೆ ತುಂಬಾ ಹತ್ತಿರವಾದುದು. ಏನನ್ನು ನೋಡುತ್ತೇವೋ, ಏನೆಲ್ಲಾ ಜಗತ್ತಿನಲ್ಲಿ ಇದೆಯೋ ಅವುಗಳೇ ವಿಜ್ಞಾನದ ತಳಹದಿ, ಹಾಗಾಗಿ ವಿಜ್ಞಾನವೆಂಬುದು ಸರಳ, ನಿತ್ಯಜೀವನಕ್ಕೆ ಹತ್ತಿರವಾದ ವಿಷಯ ಎಂಬುದನ್ನು ಹೇಳಿದರೆ ಒಳಿತು. "ನೋಡಿ ಕಲಿ, ಮಾಡಿ ನಲಿ" ಎಂಬ ಸರಳ ತಂತ್ರವನ್ನು ಬಳಸಿ ವಿಜ್ಞಾನ ವಿಷಯ ಬೋಧನೆ ಮತ್ತು ಕಲಿಕೆಯನ್ನು ಹೆಚ್ಚು ಆಕರ್ಷಕ ಮತ್ತು ಸರಳವಾಗುವಂತೆ ಮಾಡೋಣವಲ್ಲವೇ?


### ಭಾವಪೂರ್ಣ ಶ್ರದ್ಧಾಂಜಲಿ

ಮಹಾರಾಷ್ಟ್ರ ರಾಜ್ಯದ ಶಿಕ್ಷಕ ಪರಿಷತ್ತಿನ ಪ್ರಾರಂಭದ ತಂಡದಲ್ಲಿ ಸೇವೆ ಸಲ್ಲಿಸುತ್ತಾ ಮೂರು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿ, ಸಂಘಟನೆಯಲ್ಲಿಯೂ ವಿವಿಧ ಸ್ತರದಲ್ಲಿ ಕಾರ್ಯನಿರ್ವಹಿಸುತ್ತಾ ಅಧ್ಯಕ್ಷೆಯಾಗಿ, ಅಖಿಲ ಭಾರತೀಯ ಸ್ತರದಲ್ಲಿ ಉಪಾಧ್ಯಕ್ಷರಾಗಿ ಹಾಗೂ ಎಬಿಎಸ್‌ಟಿಎಫ್‌ನ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದ ಆದರಣೀಯ ಸಂಜೀವನಿ ರಾಯ್ಕರ್‌ರವರು ದಿನಾಂಕ 05.02.22 ರಂದು ನಿಧನ ಹೊಂದಿದ್ದಾರೆ. ಅವರ ಆತ್ಮಕ್ಕೆ ಸದ್ಗತಿ ನೀಡಲೆಂದು ಭಗವಂತನಲ್ಲಿ ಕ.ರಾ.ಮಾ.ಶಿ.ಸಂಘದ ಪ್ರಮುಖರು ಹಾಗೂ ಕಾರ್ಯಕರ್ತರ ಪ್ರಾರ್ಥನೆ.

-----

ಮಳ್ಳೂರು ಆನಂದರಾಯರು ಸ್ವಯಂಸೇವಕರು, ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ವಿಧಾನ ಪರಿಷತ್ ಸದಸ್ಯರಾಗಿದ್ದರು. ತುರ್ತುಪರಿಸ್ಥಿತಿಯ ವಿರುದ್ಧದ ಸಂಘದ ಹೋರಾಟದಲ್ಲಿ ಭಾಗಿಯಾಗಿ 'ಮೀಸಾ' ಬಂಧಿಯಾಗಿದ್ದರು. ದಿನಾಂಕ 14.02.22 ರಂದು ದೈವಾಧೀನರಾಗಿದ್ದಾರೆ. ಅವರ ಆತ್ಮಕ್ಕೆ ಸದ್ಗತಿ ಸಿಗಲೆಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಭಗವಂತನಲ್ಲಿ ಪ್ರಾರ್ಥಿಸುತ್ತದೆ.

ಸಂಪಾದಕ



ನಮ್ಮ ಪೂರ್ವಿಕರು ಶ್ರೇಷ್ಠರಾಗಿದ್ದರು ಮತ್ತು ಇಡೀ ಜಗತ್ತಿನ ಗೌರವವನ್ನು ಸಂಪಾದಿಸಿದ್ದರು ; ಇದಕ್ಕೆ ಕಾರಣ ಅವರಿಗೆ ತನ್ನ ಉಚ್ಚ ರಾಷ್ಟ್ರೀಯ ಆದರ್ಶಗಳ ಮತ್ತು ರಾಷ್ಟ್ರದ ಆತ್ಮ ಗೌರವದ ಅರಿವು ಇದ್ದೀತೆಂಬುದು.

- ಡಾ. ಹೆಡಗೇವಾರ್, 1889-1940

## ಪರಿವಿಡಿ


- ರಕ್ಷಣಾ ಆಹಾರ ಸಂಶೋಧನಾಲಯ ಮೈಸೂರು 3
- NEP–2020 ಯಲ್ಲಿ ಅಡಗಿದ SEZ, ಇದು ಶಿಕ್ಷಣದ ಬೆಳವಣಿಗೆಗೆ ಹೇಗೆ ಸಹಾಯಕ ? 4
- ವಿಭಜನೆಯ ಘೋರ ದುರಂತ – ಕಾರಣಗಳು ಮೂರು 5
- ಅನಾಥ ಮಕ್ಕಳ ಸಂಜೀವಿನಿ– (ರಾಯ್‌ಕರ್) 6
- ರಾಜ್ಯ ಕಾರ್ಯಕಾರಿಣಿ ಸಭೆ ವರದಿ 7
- ವಿವಿಧೆಡೆಗಳಲ್ಲಿ ಸಂಕಲ್ಪ ದಿನಾಚರಣೆ 8
- ವಿದ್ಯಾರ್ಥಿ ಮಿತ್ರ 10
- ಚಿತ್ರ ಸುದ್ದಿ 11
- ಪ್ರಶಿಕ್ಷಣ ವರ್ಗ 12

# ರಕ್ಷಣಾ ಆಹಾರ ಸಂಶೋಧನಾಲಯ (DRDO-DRFL) ಮೈಸೂರು





**ಎಂ.ಎಸ್. ಮೋಹನ್,**
ನಿವೃತ್ತ ವಿಜ್ಞಾನಿ, DRFL
ಮೈಸೂರು

ಅನುವಾದ :
**ಪ್ರೊ॥ ಎನ್. ನಾಗರಾಜು**

**ಸಮಸ್ತ ಓದುಗರಿಗೂ "ವಿಜ್ಞಾನ ದಿನದ" ಶುಭಾಷಯದೊಂದಿಗೆ,**

ರಕ್ಷಣಾ ಆಹಾರ ಸಂಶೋಧನಾಲಯವು (DRFL) ರಕ್ಷಣಾ ಸಂಶೋಧನಾಭಿವೃದ್ಧಿ ಸಂಸ್ಥೆ, ರಕ್ಷಣಾ ಮಂತ್ರಾಲಯ, ಭಾರತ ಸರ್ಕಾರದ (DRDO) ವ್ಯಾಪ್ತಿಯಲ್ಲಿ ಭಾರತದ ರಕ್ಷಣಾ ಪಡೆಗಳ– ಸೇನೆ, ನೌಕಾಪಡೆ, ವಾಯುಪಡೆ ಮತ್ತು ಅರೆಸೇನಾ ಪಡೆಗಳ ಆಹಾರದ ಅಗತ್ಯವನ್ನು ಪೂರೈಸುವ ಗುರಿಯೊಂದಿಗೆ ಡಿಸೆಂಬರ್ 1961ರಂದು ಆರಂಭವಾಯಿತು.

ನಮ್ಮ ಸೇನಾಪಡೆಗಳನ್ನು ವಾಸಿಸಲು ಕಷ್ಟಸಾಧ್ಯವಾದ (inhospitable) ಮತ್ತು ಪ್ರತಿಕೂಲ ಪರಿಸ್ಥಿತಿಯಲ್ಲಿನ ಸ್ಥಳಗಳಲ್ಲಿ – ಅಂದರೆ ಶುಷ್ಕ ಮರುಭೂಮಿಯಿಂದ ಹಿಡಿದು ಶೂನ್ಯಕ್ಕೂ ಕೆಳಗಿನ ಉಷ್ಣಾಂಶವಿರುವೆಡೆಗಳು, ಉತ್ತರದಲ್ಲಿನ ಪರ್ವತ ಪ್ರದೇಶದ ಹಿಮನದಿಗಳು, ಈಶಾನ್ಯ ಭಾರತ ಪ್ರದೇಶಗಳು ಇತ್ಯಾದಿ, ಕಾರ್ಯನಿರ್ವಹಿಸಲು ನಿಯೋಜಿಸಲಾಗುತ್ತದೆ. ಕೆಲವು ಬಾರಿ ಮಾರ್ಗವೂ ಸಹ ಮುಚ್ಚಿಹೋಗಿರುತ್ತದೆ. ಅಂತಹ ವೇಳೆಯಲ್ಲಿ ಸೇನೆಗೆ ಮೊದಲೇ ಬೇಯಿಸಲ್ಪಟ್ಟು ಪ್ಯಾಕ್ ಮಾಡಿದ ರೇಷನ್ ಅಥವಾ ಅತಿ ಕಡಿಮೆ ಅವಧಿಯಲ್ಲಿ ತಯಾರಿಸಬಹುದಾದ ಆಹಾರದ ಅಗತ್ಯತೆ ಇರುತ್ತದೆ ಮತ್ತು ಅಂತಹ ಆಹಾರವು (Shelf-life) ದೀರ್ಘಕಾಲ ಶೇಖರಿಸಿ ಇಡಬಹುದಾದ ಸೌಲಭ್ಯ ಹೊಂದಿದ್ದು, ಪುಷ್ಟಿದಾಯಕ ಅಂಶಗಳೊಂದಿಗೆ ಸೈನಿಕರಿಗೆ ಅಗತ್ಯವಿರುವ ಕ್ಯಾಲೊರಿಗಳನ್ನು ಸಹ ಒಳಗೊಂಡಿರಬೇಕಾಗುತ್ತದೆ.

ರಕ್ಷಣಾ ಆಹಾರ ಸಂಶೋಧನಾಲಯದ (DFRL) ಸ್ಥಾಪನೆಯಿಂದ ಪರಂಪರಾಗತ ಭಾರತೀಯ ಆಹಾರವನ್ನು ಅಭಿವೃದ್ಧಿಪಡಿಸಿ ಅವುಗಳನ್ನು ಹಗುರವಾದ ಮತ್ತು ಮೆದುವಾದ ಚೀಲಗಳಲ್ಲಿ ಶೇಖರಿಸುವ ಕಾರ್ಯಕ್ಕೆ ಗಮನ ಹರಿಸಲು ಸಾಧ್ಯವಾಯಿತು. ಈ ಸಿದ್ಧಪಡಿಸಿದ ಪ್ಯಾಕ್ ಮಾಡಿದ ರೇಷನ್‌ಗಳು ಭದ್ರತಾ ಪಡೆಗಳಿಗೆ ಪುಷ್ಟಿಯುತ ಆಹಾರವನ್ನು ಪೂರೈಸುವಂತೆ ರೂಪಿಸಬೇಕಾಗಿತ್ತು (Design). ಅಂತೆಯೇ ಸದರಿ ಆಹಾರವು ವೈವಿಧ್ಯಮಯ ಭಾರತೀಯ ರಕ್ಷಣಾ ಪಡೆಗಳ ರುಚಿ, ರಸನೇಂದ್ರಿಯ (palate) ಹಾಗೂ ಆಹಾರ ಅಭ್ಯಾಸಗಳಿಗೆ ಹೊಂದಿಕೊಳ್ಳುವಂತೆ ತಯಾರಿಸಲ್ಪಟ್ಟಿದೆ.

1965ರಲ್ಲಿಯೇ DFRL ನಲ್ಲಿ ನಾಲ್ಕು (4) ತಾಂತ್ರಿಕ ವಿಭಾಗಗಳು:

1. ಆಹಾರ ತಂತ್ರಜ್ಞಾನ/ ಔದ್ಯೋಗಿಕ ವಿಜ್ಞಾನ (Food Technology)
2. Bio-Chemistry –nutrition- microbiology
3. ಆಹಾರ ಸಂರಕ್ಷಣೆ ಮತ್ತು ಸಂಸ್ಕರಣೆ
   Food preservation & packaging
4. Food engineering

ಯೋಜನೆಗಳನ್ನು ರೂಪಿಸಿ ಸಂಘಟಿತವಾಗಿರುವುದು, ಗ್ರಂಥಾಲಯ ಮತ್ತು ಬೆಂಬಲ ನೀಡುವ (ಸಹಾಯಕ) ಶಾಖೆಯಾಗಿ ದಾಸ್ತಾನು ಮಳಿಗೆ ಹಾಗೂ ಕಾರ್ಯಾಗಾರ ಸ್ಥಾಪನೆ– ಈ ನಿಟ್ಟಿನಲ್ಲಿ ಸಂಶೋಧನಾ ಕಾರ್ಯವನ್ನು ಪ್ರಾರಂಭಿಸಿದವು. 1972ರಲ್ಲಿ ಪ್ರಯೋಗಾಲಯವು ಎಲ್ಲ ಮೂಲ ಸೌಕರ್ಯಗಳನ್ನುಳ್ಳ ನೂತನ ಕಟ್ಟಡಕ್ಕೆ ಸ್ಥಳಾಂತರಿಸಲ್ಪಟ್ಟಿತು. ಹಂತ ಹಂತವಾಗಿ ಬೆಳೆದು ಪ್ರಸ್ತುತ 8 ತಾಂತ್ರಿಕ ವಿಭಾಗಗಳನ್ನೊಳಗೊಂಡಿದ್ದು ಅಗತ್ಯವಾದ ಸಹಾಯಕ ಸಿಬ್ಬಂದಿ ವರ್ಗವನ್ನೂ ಹೊಂದಿರುತ್ತದೆ. ಈ ರೀತಿ DFRL ಕ್ರಮೇಣ ವಿಸ್ತಾರಗೊಳ್ಳುತ್ತ ಅನೇಕ ಸಂಸ್ಕರಿತ ಆಹಾರಗಳನ್ನು ಅಭಿವೃದ್ಧಿಪಡಿಸಿರುತ್ತದೆ ಹಾಗೂ ಸೈನ್ಯದಲ್ಲಿನ ಸರಬರಾಜು ದಾಸ್ತಾನು ಮಳಿಗೆಯಲ್ಲಿನ (Army supply corp. Depot, ie ASC) ಸಮಸ್ಯೆಗಳನ್ನು ಪರಿಹರಿಸಿರುತ್ತದೆ. ಅದಲ್ಲದೆ ಸಿದ್ಧಪಡಿಸಿದ ರೇಷನ್, ಪ್ರಾಣರಕ್ಷಣೆಗೆ ಅಗತ್ಯವಾದ ರೇಷನ್ ಎಲ್ಲವನ್ನೂ ಪೂರೈಸಿದೆ. ಪ್ರಾಣರಕ್ಷಣೆಗೆ ಅಗತ್ಯವಾದ ಉತ್ತಮ ("Shelf-life") ಉಳ್ಳ ಪುಷ್ಟಿದಾಯಕ ಚಾಕೋಲೇಟ್ ಬಾರ್‌ಗಳು.

ಸಂಶೋಧನಾಲಯವು ಸೇನಾಧಿಕಾರಿಗಳಿಗೆ ಪುನಶ್ಚೇತನ ಬೋಧನಾ ತರಗತಿಗಳು ಮತ್ತು ಅಲ್ಪಾವಧಿಯ ಬೋಧನಾ ತರಗತಿಗಳು ಇವುಗಳ ಮೂಲಕ ಆಹಾರ ಸಂಸ್ಕರಣೆ, ಶೇಖರಣೆ, ಆಹಾರ ಸುರಕ್ಷಿತತೆ ಮತ್ತು ಅಭಿವೃದ್ಧಿ (R & D) ಚಟುವಟಿಕೆಗಳು ಅನೇಕ ಸಂಶೋಧನಾ ಪ್ರಬಂಧಗಳು, ಪೇಟೆಂಟ್‌ಗಳು ನಿಯತಕಾಲಿಕೆಗಳಲ್ಲಿ ಪ್ರಖ್ಯಾತ ಲೇಖನಗಳು– ಎಲ್ಲವನ್ನು ಸಾಧ್ಯವಾಗಿಸಿವೆ. DFRL ಅನೇಕ DRDO ವಸ್ತುಪ್ರದರ್ಶನಗಳಲ್ಲಿ ಭಾಗವಹಿಸಿ– ಉದಾ: ಮೈಸೂರು ದಸರಾ ವಸ್ತುಪ್ರದರ್ಶನ ಹಾಗೂ ತೋಟಗಾರಿಕೆಯ ವಸ್ತುಪ್ರದರ್ಶನ, ಸಾರ್ವಜನಿಕರಿಗೆ ಪ್ರಯೋಗಾಲಯದ (R & D) ಚಟುವಟಿಕೆಗಳ ಬಗ್ಗೆ ತಿಳುವಳಿಕೆ ನೀಡುತ್ತಿರುತ್ತದೆ.

DFRL "ಆಹಾರ ವಿಶ್ಲೇಷಣೆ ಮತ್ತು ಗುಣಮಟ್ಟದ ಆಶ್ವಾಸನೆ "(Food Analysis & Quality Assurance)" ಎಂಬ ಸ್ನಾತಕೋತ್ತರ ಡಿಪ್ಲೊಮಾ ಪದವಿಯನ್ನು (10 ತಿಂಗಳಕಾಲ) ವಿವಿಧ ರಾಜ್ಯಗಳ ವಿಜ್ಞಾನ ಪದವೀಧರರ ಉಪಯೋಗಕ್ಕೆ ನಡೆಸುತ್ತಿದೆ. ಇದು ಮೈಸೂರು ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುತ್ತದೆ. ಈ ಶಿಕ್ಷಣದ ಪಠ್ಯಕ್ರಮವು ಶೇ 60ರಷ್ಟು ಪ್ರಾಯೋಗಿಕ ತರಗತಿಗಳನ್ನು ಮತ್ತು ಶೇ 40ರಷ್ಟು ಸಿದ್ಧಾಂತ ಭಾಗವನ್ನು (Theory) ಒಳಗೊಂಡಿರುತ್ತದೆ. ಇಲ್ಲಿ ಉತ್ತೀರ್ಣಗೊಂಡ ಅಭ್ಯರ್ಥಿಗಳು ವಿಶ್ಲೇಷಣಾ ಕಾರ್ಯದಲ್ಲಿ ಪರಿಣತಿ ಪಡೆದಿದ್ದು ಆಹಾರ ಸಂಸ್ಕರಣಾ ಉದ್ಯಮಕ್ಕೆ ಒಂದು ವರಪ್ರಸಾದದಂತಿರುತ್ತಾರೆ. ಇಲ್ಲಿನ ಬೋಧಕ ವರ್ಗದಲ್ಲಿ 8 ವಿಭಾಗಗಳ ವಿಜ್ಞಾನಿಗಳೂ ಸೇರಿದ್ದಾರೆ. ಈ ರೀತಿ ಇಲ್ಲಿನ P.G Diploma ಪದವಿಯ ನೇರ ಉದ್ಯೋಗದೆಡೆ ಚಾಚಿರುವ ಪದವಿಯಾಗಿ ಪರಿವರ್ತನೆಗೊಂಡಿದೆ. ಇತ್ತೀಚೆಗೆ "ಆಹಾರ ವಿಶ್ಲೇಷಣೆ ಮತ್ತು ಗುಣಮಟ್ಟದ ನಿರ್ವಹಣೆ (Food Analysis & Quality management) ವಿಷಯದಲ್ಲಿ M.Sc ಪದವಿ ಶಿಕ್ಷಣವನ್ನು ಆರಂಭಿಸಲು ಮೈಸೂರು ವಿಶ್ವವಿದ್ಯಾಲಯದಿಂದ ಪೂರ್ವಭಾವಿ ಅನುಮತಿಯೂ ದೊರಕಿರುತ್ತದೆ. DFRL ಪ್ರತಿವರ್ಷವೂ ಫೆಬ್ರವರಿ 28ರಂದು "ರಾಷ್ಟ್ರೀಯ ವಿಜ್ಞಾನ ದಿನ" ಮತ್ತು ಮೇ 11ರಂದು "ರಾಷ್ಟ್ರೀಯ ಟೆಕ್ನಾಲಜಿ ದಿನ" ವನ್ನಾಗಿ ಆಚರಿಸುತ್ತಿದೆ.

DFRL ದೇಶಾದ್ಯಂತ ಅನೇಕ ವಿಚಾರಗೋಷ್ಠಿ ಮತ್ತು ಸಮ್ಮೇಳನಗಳಲ್ಲಿ Food Science &Technology (ಆಹಾರ ತಂತ್ರಜ್ಞಾನ/ ಔದ್ಯೋಗಿಕ ವಿಜ್ಞಾನ) ವಿಷಯವನ್ನು ಕುರಿತು ಭಾಗವಹಿಸಿರುತ್ತದೆ. ಪ್ರಯೋಗ ಶಾಲೆಯ ಅನೇಕ ವಿಜ್ಞಾನಿಗಳು AFST-I ಸದಸ್ಯರಾಗಿರುತ್ತಾರೆ. (Association of

ಪುಟ 6 ಕ್ಕೆ ➤

# NEP–2020 ಯಲ್ಲಿ ಅಡಗಿದ SEZ, ಇದು ಶಿಕ್ಷಣದ ಬೆಳವಣಿಗೆಗೆ ಹೇಗೆ ಸಹಾಯಕ ?



**ಚಿದಾನಂದ ಆ ಕೇ ಪಾಟೀಲ್**
**ಪ್ರಧಾನ ಕಾರ್ಯದರ್ಶಿ, ಕ.ರಾ.ಮಾ.ಶಿ.ಸಂಘ**
**ಸದಸ್ಯರು, ಎನ್.ಇ.ಪಿ2020**
**ಅನುಷ್ಠಾನ ಸಮಿತಿ(ಶಾಲಾ ಶಿಕ್ಷಣ),**
**ಕರ್ನಾಟಕ ಸರ್ಕಾರ, ಕರ್ನಾಟಕ**

ನಾನು ನಿಮ್ಮ ಜೊತೆಯಲ್ಲಿ SEZ ವಿಷಯ ಹಂಚಿಕೊಳ್ಳುವುದಕ್ಕಿಂತ ಮೊದಲು ಹೋದ ತಿಂಗಳು ಇದೇ ಅಂಕಣದಲ್ಲಿ ಚರ್ಚಿಸಿದ FLN ಬಗ್ಗೆ ಬಹಳಷ್ಟು ಓದುಗರು ಸಾಮಾಜಿಕ ಜಾಲತಾಣದ ಮೂಲಕ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತ ಅನೇಕ ಸಲಹೆಗಳನ್ನು ನೀಡಿರುವಿರಿ. ತಮ್ಮ ಸಲಹೆಗಳನ್ನು ನಾನು ಗೌರವ ಪೂರಕವಾಗಿ ಸ್ವೀಕರಿಸಿರುವೆ ಮತ್ತು ಅವುಗಳನ್ನು NEP–2020 ಅನುಷ್ಠಾನದಲ್ಲಿ ಅಳವಡಿಸಲು ಸಭೆಯಲ್ಲಿ ಚರ್ಚಿಸುವೆ. ಈ ತಿಂಗಳ SEZ ನೊಂದಿಗೆ ತಮ್ಮೆಲ್ಲರನ್ನು ಭೇಟಿಯಾಗಲು ಬಂದಿರುವೆ.

ಸ್ವಾತಂತ್ರ್ಯ ಪೂರ್ವದಲ್ಲಿ ರಾಜಾರಾಮ ಮೋಹನರಾಯ, ದಯಾನಂದ ಸರಸ್ವತಿ, ನಾರಾಯಣರು, ಸ್ವಾಮಿ ವಿವೇಕಾನಂದರು, ಮಹಾತ್ಮಾ ಜೋತಿಬಾ ಫುಲೆಯಂತಹ ಸಾಮಾಜಿಕ ಚಿಂತಕರು ಕಂಡ ಕನಸನ್ನು NEP–2020 ಯಲ್ಲಿ ಅಡಗಿದ SEZ, ನನಸು ಮಾಡಲು ಸಹಾಯಕವಾಗಿದೆ.

SPECIAL EDUCATION ZONE (SEZ) ಎನ್ನುವುದು NEP–2020 ಯಲ್ಲಿ ಬಹು ಪ್ರಮುಖ ಅಂಶವಾಗಿದೆ. ಜನನ ಅಥವಾ ಇನ್ನಿತರೆ ಹಿನ್ನೆಲೆಯ ಸಂದರ್ಭಗಳಿಂದಾಗಿ ಯಾವುದೇ ಮಗು ಕಲಿಯಲು ಮತ್ತು ಉತ್ಕೃಷ್ಟ ಸಾಧನೆ ಮಾಡಲು ಇರುವ ಯಾವುದೇ ಅವಕಾಶವನ್ನು ಕಳೆದುಕೊಳ್ಳುವಂತಿರಬಾರದು ಎನ್ನುವುದು NEP–2020 ಯಲ್ಲಿಯ ಪ್ರಮುಖ ಆಶಯವಾಗಿದೆ. ಭಾರತೀಯ ಶಿಕ್ಷಣ ವ್ಯವಸ್ಥೆ ಮತ್ತು ಸರ್ಕಾರದ ನೀತಿಗಳು ಎಲ್ಲ ಹಂತದ ಶಾಲಾಶಿಕ್ಷಣದಲ್ಲಿ ಲಿಂಗ ಮತ್ತು ಸಾಮಾಜಿಕ ವರ್ಗದ ಅಂತರವನ್ನು ನಿವಾರಿಸುವಲ್ಲಿ ಪ್ರಗತಿಯ ಹಂತದಲ್ಲಿದ್ದರೂ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಗಳಿದ ಗುಂಪುಗಳಿಗೆ ಸಂಬಂಧಿಸಿದಂತೆ ಅಸಮಾನತೆಗಳು ಇನ್ನು ಉಳಿದಿರುವುದನ್ನು ಮನಗಂಡಿರುವ NEP–2020 ಅದಕ್ಕಾಗಿ SEZ ಗಳನ್ನು ಗುರುತಿಸಲು ಒತ್ತು ನೀಡಿದೆ. ಇದರಲ್ಲಿ

* Socio -economically disadvantaged Groups(SEDGs)
* ಲಿಂಗ (ಸ್ತ್ರೀ ಮತ್ತು ತೃತೀಯ ಲಿಂಗ)
* ಸಾಮಾಜಿಕ – ಸಾಂಸ್ಕೃತಿಕ ಗುರುತುಗಳು( ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಓಬಿಸಿ ಮತ್ತು ಅಲ್ಪಸಂಖ್ಯಾತರು)
* ಗೋಳಿಕವಾಗಿ (ಹಳ್ಳಿ, ಸಣ್ಣಪಟ್ಟಣ, ಪರ್ವತ ಪ್ರದೇಶ, ನಿಸ್ಸಾರ ಪ್ರದೇಶಗಳು ಇತ್ಯಾದಿ)
* ವಿಕಲಾಂಗತೆಗಳು (ಕಲಿಕಾ ನ್ಯೂನತೆಗಳು ಸೇರಿದಂತೆ)
* ಸಾಮಾಜಿಕ– ಆರ್ಥಿಕವಾಗಿ ಹಿಂದುಳಿದ (ವಲಸೆ, ಕಡಿಮೆ ಆದಾಯ, ದುರ್ಬಲ ಸ್ಥಿತಿಯ ಮಕ್ಕಳು, ಶೋಷಿತ ಮಕ್ಕಳು, ಭಿಕ್ಷುಕರು, ಅನಾಥರು)

ಹೀಗೆ ಅನೇಕ ಅಂಶಗಳನ್ನು SEZ ಒಳಗೊಂಡಿದೆ. ಈ ಅಂಶಗಳು ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ಮಕ್ಕಳ ದಾಖಲಾತಿಯಲ್ಲಿ ನಿರಂತರವಾಗಿ ಅಂದರೆ 2016–17ರಲ್ಲಿಯ U-DISE

| **ಅಂಶಗಳು** | **ಪ್ರಾಥಮಿಕ ಶಿಕ್ಷಣ ದಾಖಲಾದ ಮಕ್ಕಳು** | **ಉನ್ನತ ಶಿಕ್ಷಣಕ್ಕೆ ದಾಖಲಾದ ಮಕ್ಕಳು** |
|---|---|---|
| ಪರಿಶಿಷ್ಠ ಜಾತಿಗೆ ಸೇರಿದ ಮಕ್ಕಳು | 19.6% | 10.6% |
| ಪರಿಶಿಷ್ಠ ಪಂಗಡಕ್ಕೆ ಸೇರಿದ ಮಕ್ಕಳು | 1.1% | 17.3% |
| ವಿಕಲ ಚೇತನ ಮಕ್ಕಳು | 6.8% | 0.25% |

ಇದನ್ನು ಅವಲೋಕಿಸಿದಾಗ ದಾಖಲಾತಿಯ ದರ ಕುಸಿತ ಕಂಡಿರುವುದೆಂದು ಅರ್ಥೈಯಿಸಿಕೊಳ್ಳಬಹುದಾಗಿದೆ. ಭೌಗೋಳಿಕ ಮತ್ತು ಐತಿಹಾಸಿಕ ಅನೇಕ ಅನಾನುಕೂಲತೆಯಿಂದಾಗಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅದರಲ್ಲಿ ವಿಶೇಷವಾಗಿ ಬುಡಕಟ್ಟು ಸಮುದಾಯದ ಮಕ್ಕಳು ಶಾಲಾ ಶಿಕ್ಷಣವು ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ತಮ್ಮ ಜೀವನಕ್ಕೆ ಅಪ್ರಸ್ತುತ ಎಂದು ಭಾವಿಸಿಕೊಂಡಿರುವುದು ಸಮಸ್ಯೆಯಾಗಿದೆ. ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗಗಳು ಹಾಗೂ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ (CWSN) ಗುಣಮಟ್ಟದ ಶಿಕ್ಷಣ ಒದಗಿಸುವುದಕ್ಕೆ ವಿಶೇಷ ಪ್ರಯತ್ನಗಳ ಅವಶ್ಯಕತೆಯನ್ನು NEP–2020 ಹೇಳಿದೆ.

### SEDG's ಗಳೂ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸಲು NEP–2020 ಸೂಚಿಸಿದ ಕ್ರಮಗಳು

- ಪ್ರಸ್ತುತ ಜಾರಿಯಲ್ಲಿರುವ ಕಾರ್ಯಕ್ರಮಗಳ ಪ್ರಯೋಜನ ಆ ಸಮುದಾಯಗಳಿಗೆ ತಲುಪಿರುವ ಬಗ್ಗೆ ಖಚಿತ ಪಡಿಸಿಕೊಳ್ಳಲು ಪ್ರತ್ಯೇಕ ಕಾರ್ಯ ವಿಧಾನ ಅನುಸರಿಸುವುದು.
- CWSN ಮಕ್ಕಳಿಗೆ ಗುಣಮಟ್ಟದ ಶಿಕ್ಷಣಕ್ಕೆ ವಿಶೇಷ ಪ್ರಯತ್ನ ಮಾಡುವುದು.
- ECCE ಹಂತದಲ್ಲಿ ಕಲಿಕೆಯನ್ನು ಪರಿಣಾಮಕಾರಿಗೊಳಿಸುವುದು.
- ಸಾಮಾಜಿಕ ವರ್ಗಗಳ ನಡುವಿನ ಅಂತರ ತಗ್ಗಿಸಲು ಕೇಂದ್ರೀಕೃತ ಪ್ರಯತ್ನಕ್ಕಾಗಿ ಯೋಜನೆಗಳನ್ನು ರೂಪಿಸುವುದು.
- ಈ ವರ್ಗದ ವಿದ್ಯಾರ್ಥಿಗಳ ಪೋಷಕರನ್ನು ಉತ್ತೇಜಿಸಲು ಷರತ್ತುಬದ್ಧ ನಗದು ವರ್ಗಾವಣೆ, ಸಾರಿಗೆಗಾಗಿ ಸೈಕಲ್ ಒದಗಿಸುವುದು ಸೇರಿದಂತೆ ಅನೇಕ ಯೋಜನೆಗಳನ್ನು ಇನ್ನೂ ಬಲಪಡಿಸುವುದು.
- ಮಕ್ಕಳ ಸುರಕ್ಷಾ ಕ್ರಮಗಳಿಗೆ ಒತ್ತು ನೀಡುವುದು. one-on-one ವಿಧಾನದ ಮೂಲಕ ಬೋಧನೆ, ಸಹಪಾಠಿಗಳ ಮೂಲಕ ಬೋಧನೆ, ಮುಕ್ತ ಶಾಲೆ, ಸೂಕ್ತ ಮೂಲ ಸೌಕರ್ಯಗಳನ್ನು ನೀಡುವುದು ಹಾಗೂ ತಾಂತ್ರಿಕ ಸಹಾಯ ಪಡೆಯುವುದು. ವರ್ಗದ ಮಕ್ಕಳ ಕಲಿಕೆಗೆ ಸಹಾಯಕವಾಗಿದೆ.

**ಪುಟ 9 ಕ್ಕೆ ➢**

# ವಿಭಜನೆಯ ಘೋರ ದುರಂತ – ಕಾರಣಗಳು ಮೂರು

ಶ್ರೀ ಸು. ರಾಮಣ್ಣ

**ಸ್ವಾತಂತ್ರ್ಯ ಅಮೃತೋತ್ಸವದ ಸಂದರ್ಭದಲ್ಲಿ ಈ ಘಟನೆಗಳು ಎಲ್ಲರ ಸ್ಮರಣೆಗೆ ಬರಬೇಕು ಎಂಬ ಉದ್ದೇಶದಿಂದ ಈ ಲೇಖನಮಾಲೆ ಈ ಪುಟಗಳು ಸು. ರಾಮಣ್ಣನವರ ಸ್ವಾತಂತ್ರ್ಯ ಹೋರಾಟ ಪುಸ್ತಕದ ಒಂದು ಭಾಗ. ಇದು 3–4 ಕಂತುಗಳು ಬರುತ್ತದೆ**

(ಹಿಂದಿನ ಸಂಚಿಕೆಯಿಂದ...)

## 1. ಶಿಥಿಲಗೊಂಡ ರಾಷ್ಟ್ರ ಮತ್ತು ರಾಷ್ಟ್ರೀಯತೆಯ ಪರಿಕಲ್ಪನೆ

ಗಾಂಧೀಜಿ, ಲೋಕಮಾನ್ಯ ತಿಲಕ, ಅರವಿಂದ ಘೋಷ್, ನಿವೇದಿತಾ, ಬಂಕಿಮಚಂದ್ರ ಇಂಥವರು ರಾಷ್ಟ್ರೀಯತೆಯ ಬಗ್ಗೆ ನಿಚ್ಚಳವಾದ ದೃಷ್ಟಿ ಹೊಂದಿದ್ದರು. ರಾಷ್ಟ್ರದ ಮೂಲ ನಂಬಿಕೆಯೇ, ಭಾರತ ಕೇವಲ ಭೂಮಿಯ ಒಂದು ತುಂಡಲ್ಲ; ಅದು ನಮ್ಮ ತಾಯಿ– ಮಾತೃಭೂಮಿ ಎಂಬುದು. ಎರಡನೆಯದಾಗಿ ನಾವು ಈ ಭೌಗೋಳಿಕ ಪ್ರದೇಶದಲ್ಲಿ ವಾಸಮಾಡುವ ಪ್ರಜೆಗಳು ಮಾತ್ರವಲ್ಲ, ಬದಲಾಗಿ ಭಾರತ ಮಾತೆಯ ಮಕ್ಕಳು– ಆದ್ದರಿಂದ ನಾವೆಲ್ಲರೂ ಒಂದೇ ವಿಶಾಲ ಕುಟುಂಬದ ಸೋದರ –ಸೋದರಿಯರು. ಮೂರನೆಯದಾಗಿ ನಮ್ಮನ್ನು ಭಾವ ಬಂಧನದಲ್ಲಿ ಜೋಡಿಸಿರುವುದು ನಮ್ಮ ಪ್ರಾಚೀನ ಸಂಸ್ಕೃತಿಯೇ ಹೊರತು ರಾಜಕೀಯ ವ್ಯವಸ್ಥೆಯಲ್ಲ.

ಆದರೆ ಮೂಲ ನಂಬಿಕೆಗೆ ತದ್ವಿರುದ್ಧವಾಗಿ ಬ್ರಿಟಿಷರು "ಇಂಡಿಯಾ ಒಂದು ರಾಷ್ಟ್ರವೇ ಅಲ್ಲ; ಹಲವಾರು ಸ್ವತಂತ್ರ ರಾಜ್ಯಗಳ ಒಂದು ಸಮೂಹ. ನಾವು ಈ ಎಲ್ಲ ರಾಜ್ಯಗಳನ್ನೂ ಒಂದು ಕೇಂದ್ರ ಶಾಸನದ ಅಡಿ ಒಗ್ಗೂಡಿಸಿದೆವು" ಎಂದು ಒಂದೇ ಸುಳ್ಳನ್ನು ಪದೇ ಪದೇ ಬಡಬಡಿಸುತ್ತಾ ಹೋದಂತೆ, ಅದೇ ಸತ್ಯವೆಂದು ನಮ್ಮ ಮುಖಂಡರೂ ಭ್ರಮಿತರಾಗಿ "yes, yes, we are a nation in the making" ಎಂದು ಹೇಳಲಾರಂಭಿಸಿದರು. ಇದು ಈ ದೇಶದ ದುರಂತ. ಹಾಗೆಯೇ ನಮ್ಮ ನಾಯಕರ ಮನಃಸ್ಥಿತಿಗೆ ಹಿಡಿದ ಕನ್ನಡಿ ಇದು!

ಇಲ್ಲಿ ರಾಜ್ಯಗಳು ಹಲವಿದ್ದರೂ, ಬೇರೆ ಬೇರೆ ರಾಜರುಗಳು ರಾಜ್ಯಭಾರ ಮಾಡುತ್ತಿದ್ದರೂ, ಸಾಂಸ್ಕೃತಿಕ ಏಕತೆಯ ಕಾರಣದಿಂದಾಗಿ ಅನಾದಿಕಾಲದಿಂದಲೂ ಭಾರತ ಒಂದು ರಾಷ್ಟ್ರವಾಗಿಯೇ ಉಳಿದಿತ್ತೆಂಬುದೇ ಸತ್ಯ. ಅದಕ್ಕೆ ಪೂರಕವಾಗಿ ನಮ್ಮ ವೇದ, ಪುರಾಣಗಳಲ್ಲಿಯೂ ರಾಷ್ಟ್ರೀಯತೆ ಬಿಂಬಿತವಾಗಿರುವುದನ್ನು ಕಾಣಬಹುದು. ಉದಾಹರಣೆಗೆ ಅಥರ್ವ ವೇದದ ಭೂಮಿಸೂಕ್ತದಲ್ಲಿ "ಮಾತಾ ಭೂಮಿಃ ಪುತ್ರೋಹಂ ಪೃಥಿವ್ಯಾಃ" ಎಂದು ಸಾರಿದರೆ, ವಿಷ್ಣು ಪುರಾಣದಲ್ಲಿ;


**ಉತ್ತರಂ ಯತ್ಸಮುದ್ರಸ್ಯ ಹಿಮಾದ್ರೈಶ್ಚೈವ ದಕ್ಷಿಣಮ್।**
**ವರ್ಷಂ ತದ್‌ಭಾರತಂ ನಾಮ ಭಾರತೀ ಯತ್ರ ಸಂತತಿ॥**

ಸಮುದ್ರದ ಉತ್ತರಕ್ಕೆ ಹಾಗೂ ಹಿಮಾಲಯದ ದಕ್ಷಿಣಕ್ಕೆ ಹರಡಿರುವ ಭೂಮಿಯೇ ಭಾರತ ಹಾಗೂ ನಾವು ಭಾರತೀಯರು ಭಾರತದ ಮಕ್ಕಳು ಎಂದು ಹೇಳಿದೆ. ಹಾಗೆಯೇ ಭಾರತಮಾತಾ ಕೀ ಜಯ್, ವಂದೇಮಾತರಂ ಒಂದು ಶುಷ್ಕ ಘೋಷಣೆಯಾಗದೆ ರಾಷ್ಟ್ರಭಾವವನ್ನು ಅರಳಿಸುವ ಮಂತ್ರಗಳಾದವು ಎಂಬುದು ಚಾರಿತ್ರಿಕ ಸತ್ಯ. ನಮ್ಮ ನಾಯಕರು ಈ ಸಂಗತಿಗಳನ್ನು ಅರ್ಥೈಸಿಕೊಳ್ಳುವುದರಲ್ಲಿ ವಿಫಲರಾದುದ್ದೇ ಎಲ್ಲಾ ದುರಂತಕ್ಕೂ ಕಾರಣವಾಯಿತು. ಅದೇ ಈ ವಿಶುದ್ಧ ಹಾಗೂ ಧನಾತ್ಮಕ ರಾಷ್ಟ್ರಭಾವವನ್ನು ಶಿಥಿಲಗೊಳಿಸಿ, ಭಾರತವನ್ನು ವಿಭಜಿಸುವ ಹಂತಕ್ಕೆ ಕಾಂಗ್ರೆಸ್ ಮುಖಂಡರು ಶರಣಾದುದಕ್ಕೆ ಪ್ರಮುಖ ಕಾರಣ.

## 2. ಬ್ರಿಟಿಷರ ಒಡೆದು ಆಳುವ ಷಡ್ಯಂತ್ರಕ್ಕೆ ಬಲಿಯಾದ ಕಾಂಗ್ರೆಸ್

ಬ್ರಿಟಿಷರು ಕಾಂಗ್ರೆಸ್ ಮುಖಂಡರಿಗೆ "ಸ್ವಾತಂತ್ರ್ಯ ಬೇಕಾದಲ್ಲಿ ಮುಸ್ಲಿಮರೊಂದಿಗೆ ಬನ್ನಿ" ಎಂದು ತಿಳಿಸಿದರೆ, ಮುಸ್ಲಿಮರಿಗೆ, "ನೀವು ನೂರಾರು ವರ್ಷಗಳ ಕಾಲ ಈ ದೇಶವನ್ನು ಆಳಿದವರು. ನಿಮ್ಮ ಬಗ್ಗೆ ಅಪಾರವಾದ ಸಹಾನುಭೂತಿ ನಮಗಿದೆ, ಹಾಗಾಗಿ ಹಿಂದುಗಳ ಹಂಗಿಗೆ ಒಳಗಾಗಬಾರದೆಂದೇ ನಮ್ಮ ಇಚ್ಛೆ. ನಿಮ್ಮ ಹಿತಾಸಕ್ತಿ ನಮ್ಮ ಜವಾಬ್ದಾರಿ" ಎಂದು ಹೇಳುತ್ತಿದ್ದರು. ಬ್ರಿಟಿಷರ ಈ ಇಬ್ಬಗೆಯ ನೀತಿ ಮುಸ್ಲಿಂ ಲೀಗ್ ಸ್ಥಾಪನೆಯಲ್ಲಿ ಪರ್ಯಾಯವಸನಗೊಂಡಿತು.

ಬ್ರಿಟಿಷರ ಕುತಂತ್ರಕ್ಕೆ ಬಲಿಯಾದ ಕಾಂಗ್ರೆಸ್ ಯಾವ ಬೆಲೆಯನ್ನಾದರೂ ತೆತ್ತು ಮುಸಲ್ಮಾನರನ್ನು ತಮ್ಮೆಡೆಗೆ ಓಲೈಸಿಕೊಳ್ಳುವ ತುಷ್ಟೀಕರಣ ನೀತಿಯನ್ನು ಆರಂಭಿಸಿತು. ಕಾಂಗ್ರೆಸ್‌ನ ಈ ದೌರ್ಬಲ್ಯವನ್ನು ಧಾರಾಳವಾಗಿ ಬಳಸಿಕೊಳ್ಳುವ "ಜಾಣ್ಮೆ"ಯನ್ನು ಮುಸ್ಲಿಂ ಲೀಗ್ ತೋರಿಸುತ್ತಾ ಹೋಯಿತು. ಒಂದಾದ ನಂತರ ಒಂದು ಅನ್ಯಾಯದ ಷರತ್ತುಗಳ ದಾಳವನ್ನು ಲೀಗ್ ಕಾಂಗ್ರೆಸ್‌ಗೆ ಹಾಕುತ್ತಾ ಹೋಯಿತು. ಇದರ ಫಲಶೃತಿಯೇ ಖಿಲಾಫತ್ ಚಳುವಳಿ ಹಾಗು ವಂದೇಮಾತರಂ ವಿಭಜನೆ.



### ಖಿಲಾಫತ್‌ನ ವಿಷ ಫಲ

**(ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಪ್ರಕಟಿಸಿದ ತನಿಖಾ ವರದಿಯಂತೆ ಕೇರಳದ ಮೋಪ್ಲಾ ದಂಗೆಗಳಲ್ಲಿ ಕೊಲೆಯಾದ ಅಮಾಯಕ ಹಿಂದುಗಳು 1500, ಬಲಾತ್ಕಾರದ ಮತಾಂತರಕ್ಕೆ ತುತ್ತಾದವರು 20000, ಲೂಟಿಯಾದ ಹಿಂದುಗಳ ಆಸ್ತಿ 3 ಕೋಟಿ ರೂಪಾಯಿ, ಹಿಂದು ಮಹಿಳೆಯರ ಮೇಲಿನ ಅತ್ಯಾಚಾರ ಮತ್ತು ಅದರ ಅಪಹರಣಗಳ ಲೆಕ್ಕವೇ ಗೊತ್ತಿಲ್ಲ. ಈ ಎಲ್ಲ ಪಾಶವೀ ಅನಾಚಾರಗಳಿಗೆ ಖಿಲಾಫತ್ ಮತಪ್ರಚಾರಕರೇ ಕಾರಣ ಎಂದು ಡಾ॥ ಆನಿಬೆಸೆಂಟರು ಸ್ಪಷ್ಟವಾಗಿ ಆಪಾದಿಸಿದರು. ಇವರು ಸ್ವಾತಂತ್ರ್ಯ ಆಂದೋಳನದ ಮುಂದಾಳು.)**

(ಮುಂದುವರೆಯುವುದು...)

# ಅನಾಥ ಮಕ್ಕಳ ಸಂಜೀವಿನಿ – (ರಾಯ್‌ಕರ್)





**ಆರ್. ಸೀತಾಲಕ್ಷ್ಮಿ**
**ವಿಶೇಷ ಆಹ್ವಾನಿತರು,**
**ಎ.ಬಿ.ಆರ್.ಎಸ್.ಎಂ ಮತ್ತು**
**ಕೆ.ಆರ್.ಎಂ.ಎಸ್.ಎಸ್**

ಶ್ರೀಮತಿ ಸಂಜೀವಿನಿ ರಾಯಕರ್‌ರವರು ಹೆಸರಿಗೆ ತಕ್ಕಂತೆ ತಾವೇ ಕಟ್ಟಿ ಬೆಳಸಿದ 3 ಅನಾಥಾಶ್ರಮದ ಮಕ್ಕಳಿಗೆ ಸ್ವಂತ ತಾಯಿ ತಂದೆಯಂತೆ ಪೋಷಿಸಿ ಅವರನ್ನು ಸತ್ಪ್ರಜೆಗಳಂತೆ ಬೆಳೆಸಿದವರು.

ಮೂಗಿನ ಮೇಲೆ ದಪ್ಪ ಕನ್ನಡಕದ, ಕುಳ್ಳಗಿನ ಶರೀರ. ಆದರೆ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಮಾತಿಗೆ ಅರ್ಥತುಂಬಿದವರು. ಮೂರುಬಾರಿ ಮಹಾರಾಷ್ಟ್ರದ ವಿಧಾನ ಪರಿಷತ್ತಿಗೆ ಮುಂಬಯಿಯ ಶಿಕ್ಷಕ ಕ್ಷೇತ್ರದಿಂದ ಚುನಾಯಿತರಾಗಿ ಶಿಕ್ಷಕರ ಅಪಾರ ಮನ್ನಣೆ ಗಳಿಸಿದವರು.

ಆಗಿನ್ನೂ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ ಹುಟ್ಟಿರಲಿಲ್ಲ. ನಮ್ಮ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು 'All India Secondary Teachers Federation' ಎಂಬ ಅಖಿಲ ಭಾರತೀಯ ಶಿಕ್ಷಕ ಸಂಘಟನೆಯೊಡನೆ ಸಂಲಗ್ನ ಪಡೆದಿತ್ತು. ಮಹಾರಾಷ್ಟ್ರದಲ್ಲಿ ಶಿಕ್ಷಕ ಸಂಘಟನೆಯನ್ನು ಹುಟ್ಟುಹಾಕಿದ, ಅಲ್ಲಿ ವಿಧಾನ ಪರಿಷತ್ತಿನ ಸದಸ್ಯರೂ ಆಗಿದ್ದ ಶ್ರೀ ಮುಕುಂದ ರಾವ್ ಕುಲಕರ್ಣಿಯವರು ಆಗ AISTF ನ ಅಧ್ಯಕ್ಷರಾಗಿದ್ದರು. ಶ್ರೀಮತಿ ಸಂಜೀವಿನಿ ರಾಯಕರ್‌ರವರು ಅದೇ ಸಂಘಟನೆಗೆ ರಾಷ್ಟ್ರೀಯ ಮಹಿಳಾ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. 1984ರಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ನಾನು ಅಖಿಲ ಭಾರತೀಯ ಸಭೆಗೆ ಮೊದಲಬಾರಿ ಹೋದಾಗ ನನಗೆ ಅವರ ಪರಿಚಯದೊಂದಿಗೆ ಅವರ ವ್ಯಕ್ತಿತ್ವದ ಪರಿಚಯವೂ ಆಯಿತು.

ಅವರು ನಡೆನುಡಿ ರೀತಿ ನೀತಿ ಎಲ್ಲದರಲ್ಲೂ ಅಚ್ಚುಕಟ್ಟು. ಕಾರ್ಯಕರ್ತರೊಂದಿಗೆ ಹಿರಿಯಕ್ಕನಂತೆ ವ್ಯವಹಾರ. ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯಪ್ರವೃತ್ತರಾಗಲು ಅನೇಕ ಹೆಣ್ಣುಮಕ್ಕಳಿಗೆ ಪ್ರೇರಕ ಶಕ್ತಿಯಾಗಿದ್ದರು. ಸಮಯಪಾಲನೆ ಬಗ್ಗೆ ಅತಿ ಶಿಸ್ತು. ಸ್ವತಃ ಬೌದ್ಧಿಕವಾಗಿ ಮೇಲ್ಮಟ್ಟದಲ್ಲಿದ್ದು ನಮ್ಮೆಲ್ಲರಿಗೂ ಮಾರ್ಗದರ್ಶನ ಮಾಡುತ್ತಿದ್ದರು.

ತಮ್ಮ 53ನೇ ವಯಸ್ಸಿನಲ್ಲಿ ಪತಿಯನ್ನು ಕಳೆದುಕೊಂಡರೂ ಧೃತಿಗೆಡದೆ ಎಲ್ಲ ಶಿಕ್ಷಕರನ್ನು ತಮ್ಮ ಆತ್ಮೀಯ ಬಂಧುಗಳಂತೆ ಭಾವಿಸಿಕೊಂಡು ಅವರ ಕಷ್ಟ ಪರಿಹಾರಕ್ಕೆ ಮುನ್ನುಗ್ಗುತ್ತಿದ್ದರು. ಸರ್ಕಾರದ ಅಧಿಕಾರಿಗಳಾಗಿರಲೀ, ಮಂತ್ರಿ ಮಹೋದಯರಾಗಿರಲಿ ತಮ್ಮ ವ್ಯವಹಾರ ಚತುರತೆಯಿಂದ ಒಲಿಸಿಕೊಂಡು ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು. ಇದೇ ಕಾರಣಕ್ಕಾಗಿ ಅವರು ಮೂರುಬಾರಿ ಎಂಎಲ್‌ಸಿ ಆಗುವುದಕ್ಕೆ ಸಾಧ್ಯವಾದದ್ದು.

ತಾವು ಶಿಕ್ಷಕ ಸಂಘಟನೆಯಲ್ಲಿ ವಹಿಸಿಕೊಂಡ ಜವಾಬ್ದಾರಿಯನ್ನು ತಮ್ಮ ಜೀವನದ ಪ್ರಥಮ ಆದ್ಯತೆಯೆಂದು ಭಾವಿಸಿ ಅನೇಕ ವರ್ಷಗಳವರೆಗೆ ಕಾರ್ಯನಿರ್ವಹಿಸಿದರು. ಕೇವಲ ಮಹಾರಾಷ್ಟ್ರವಲ್ಲದೆ, ರಾಷ್ಟ್ರಮಟ್ಟದಲ್ಲಿ ಇತರ ರಾಜ್ಯಗಳಿಗೂ ದಣಿವಿಲ್ಲದೆ ಪ್ರವಾಸಮಾಡಿ ವಿಚಾರಸಂಕಿರಣ, ಸಭೆ ಸಮ್ಮೇಳನಗಳನ್ನು ನಡೆಸಿಕೊಟ್ಟ ಹೆಗ್ಗಳಿಕೆ ತಾಯೀಜಿಯವರದ್ದಾಗಿತ್ತು.

ತಮ್ಮ 92ನೇ ತುಂಬು ವಯಸ್ಸಿನಲ್ಲಿ ಸ್ವರ್ಗಸ್ಥರಾದ ಸಂಜೀವಿನಿ ತಾಯೀಜಿಯವರಿಗೆ ನಾನು ವೈಯುಕ್ತಿಕವಾಗಿ ಹಾಗೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪರವಾಗಿ ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ಅವರು ನಡೆದ ಹಾದಿಯಲ್ಲಿ ನಡೆಯುವ ಶಕ್ತಿಯನ್ನು ನಮ್ಮೆಲ್ಲ ಕಿರಿಯ ಕಾರ್ಯಕರ್ತರಿಗೂ ಕರುಣಿಸೆಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತಾ ಈ ಹಿರಿಯರ ಆತ್ಮಕ್ಕೆ ಸದ್ಗತಿಯನ್ನು ಕರುಣಿಸೆಂದು ಸರ್ವಶಕ್ತನಲ್ಲಿ ನಮ್ರತೆಯಿಂದ ಬೇಡುತ್ತೇನೆ. **ಓಂ ಶಾಂತಿ.** ●

---

➢ **ಪುಟ 3 ರಿಂದ.....**

Food scientist &Technologists –India (ಆಹಾರ ಮತ್ತು ಔದ್ಯೋಗಿಕ ವಿಜ್ಞಾನಿಗಳ ಸಂಸ್ಥೆ – ಇಂಡಿಯಾ) AFST-I ಸಂಸ್ಥೆಯ ಪ್ರಧಾನ ಕಛೇರಿಯ CSIR-CFTRI ಮೈಸೂರಿನಲ್ಲಿದೆ.

ನಮ್ಮ ಭದ್ರತಾ ಪಡೆಗಳಿಗೆ ಅಭಿವೃದ್ಧಿ ಪಡಿಸಿದ ಆಹಾರ ಸಿದ್ಧವಸ್ತುಗಳಲ್ಲಿ ಸಂರಕ್ಷಿಸಲ್ಪಟ್ಟ ಚಪಾತಿಗಳು, ಡಬ್ಬಿಯಲ್ಲಿ ಶೇಖರಿಸಿದ ಆಹಾರ (ಸೀಮತಿ ಉತ್ಪನ್ನಗಳಿಗೆ), ತುರ್ತುಪರಿಸ್ಥಿತಿಯಲ್ಲಿನ ಆಹಾರಗಳು, ಸೂಜಿಹಲ್ವ, ಉಪ್‌ಮಾ, ತರಕಾರಿ ಮತ್ತು ಮಟನ್ ಕರ್ರಿ, ಚಿಕನ್‌ಕರ್ರಿ, ನಿರ್ಜಲೀಕರಣಗೊಳಿಸಿದ ತರಕಾರಿ ಮತ್ತು ಮಟನ್ ಪುಲಾವ್ MRE (ತಕ್ಷಣ ತಿನ್ನಲು ಸಾಧ್ಯವಾದ ಆಹಾರ) (Meals ready to eat) ಉತ್ಪನ್ನಗಳು ಮತ್ತು ಅನೇಕ ನಿರ್ಜಲೀಕರಣಗೊಳಿಸಿದ ಹಣ್ಣಿನ ಉತ್ಪನ್ನಗಳು ಮತ್ತು ಹಣ್ಣಿನ ರಸದ ಪುಡಿಗಳು ಇರುತ್ತವೆ.

### ತಾಂತ್ರಿಕ ವಿಜ್ಞಾನ ವರ್ಗಾವಣೆ, ಸಲಹೆ ನೀಡುವಿಕೆ, ವಿಸ್ತರಣೆ

(Technology Transfer, Consultancy, Extension)

DRFL ಅನೇಕ ಆಹಾರ ಉತ್ಪನ್ನಗಳು/ ಟೆಕ್ನಾಲಜಿಗಳನ್ನು (ತಾಂತ್ರಿಕ ಪರಿಣಿತಿ) ಅಭಿವೃದ್ಧಿಪಡಿಸಿದೆ. ಇವುಗಳು Shelf-stability ಮತ್ತು micro-biological safety ಒದಗಿಸುವುದರೊಂದಿಗೆ ಅನುಕೂಲತೆ, ಸಾಕಷ್ಟು ಪುಷ್ಟಿಯುತ ಅಂಶಗಳನ್ನು ಮತ್ತು ಕೆಲೊರಿಗಳನ್ನು ಹೊಂದಿರುತ್ತವೆ. ಈ ವರ್ಷಗಳಲ್ಲಿ 550ಕ್ಕೂ ಹೆಚ್ಚು ಟೆಕ್ನಾಲಜಿ ವರ್ಗಾವಣೆಯನ್ನು ಸುಮಾರು 220 ವಿವಿಧ ಆಹಾರ ಸಂಸ್ಕರಣಾ ಉದ್ಯಮಿಗಳಿಗೆ ಮಾಡಿರುತ್ತದೆ.

DRFL ತಕ್ಷಣದ ಮತ್ತು ಸಂರಕ್ಷಿಸಲ್ಪಟ್ಟ ವಿವಿಧ ರೀತಿಯ ಆಹಾರ ಸಿದ್ಧವಸ್ತುಗಳನ್ನು ರಾಷ್ಟ್ರೀಯ ಆಪತ್ತಿನ ಸಮಯದಲ್ಲಿ ಮತ್ತು ಭೂಕಂಪ, ಪ್ರವಾಹ ಪರಿಸ್ಥಿತಿಗಳಲ್ಲಿ ಒದಗಿಸಿದೆ. ಪ್ರಯೋಗಾಲಯವು ಉತ್ತಮ Shelf-stability ಉಳ್ಳ ಸಂಸ್ಕರಿತ ಆಹಾರವನ್ನು ಅಂಟಾರ್ಟಿಕದಲ್ಲಿನ ಇಂಡೊ–ಅಮೆರಿಕನ್ ಉದ್ದೇಶಿತ ಪ್ರಯಾಣ ಮಾಡುವ ತಂಡಕ್ಕೆ ಸರಬರಾಜು ಮಾಡಿರುತ್ತದೆ.

### DFRL ನ ದೃಷ್ಟಿ (Vision) ಮತ್ತು ಧ್ಯೇಯ (Mission)

**ದೃಷ್ಟಿ :** ಆಹಾರ ಸಂಶೋಧನೆ ಮತ್ತು ಉತ್ಪನ್ನಗಳ ಅಭಿವೃದ್ಧಿ ಕ್ಷೇತ್ರದಲ್ಲಿ "ಅತ್ಯಂತ ಉತ್ಕೃಷ್ಟ ನೇತಾರ" ಆಗಿ ಪರಿವರ್ತನೆ.

**ಧ್ಯೇಯ:** ಭದ್ರತಾ ಪಡೆಗಳ ಅಗತ್ಯ ಪೂರೈಕೆಗಾಗಿ ಪುಷ್ಟಿಯುತ, ಅನುಕೂಲಕರ ಮತ್ತು ಸುರಕ್ಷಿತವಾದ ಆಹಾರ ಸಿದ್ಧವಸ್ತುಗಳನ್ನು ರೂಪಿಸಿ, ಅಭಿವೃದ್ಧಿ ಪಡಿಸಿ, ಅದರ ಯೋಗ್ಯತೆಯನ್ನು ನಿರ್ಣಯಿಸುವುದು ಹಾಗೂ ನಾಗರಿಕ ಸಮಾಜಕ್ಕೆ ಅದರ ಪ್ರಯೋಜನವಾಗುವಂತೆ ನೆರವಾಗುವುದು. ಆಹಾರ ಉತ್ಪಾದನಾ ಉದ್ಯಮಗಳು ಮೈಸೂರಿನ (DRFL) ಸಂಸ್ಥೆಯು ನಮ್ಮ ರಕ್ಷಣಾ ಪಡೆಗಳಿಗೆ ಮತ್ತು ದೇಶಕ್ಕೆ ಶ್ಲಾಘನೀಯ ಸೇವೆ ಸಲ್ಲಿಸುವ ಆದರ್ಶ ಸೂತ್ರದೊಂದಿಗೆ ಮುನ್ನಡೆಯುತ್ತಿದೆ. ●

# ರಾಜ್ಯ ಕಾರ್ಯಕಾರಿಣಿ ಸಭೆ ವರದಿ

**ಚಿದಾನಂದ ಆ. ಪಾಟೀಲ**
**ರಾಜ್ಯ ಪ್ರಧಾನಕಾರ್ಯದರ್ಶಿ**
**ಕ.ರಾ.ಮಾ.ಶಿ.ಸಂ.**



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಕಾರ್ಯಕಾರಿಣಿ ಬೈಠಕ್ ಕೋವಿಡ್ ಕಾರಣದಿಂದಾಗಿ Zoom App ನಲ್ಲಿ ದಿನಾಂಕ 30/01/2022ರಂದು ಭಾನುವಾರ ಬೆಳಿಗ್ಗೆ 9.30ರಿಂದ ಆರಂಭವಾಯಿತು. ಪ್ರಾರಂಭದಲ್ಲಿ ಸರಸ್ವತಿಯ ಪ್ರಾರ್ಥನೆಯನ್ನು ಕ.ರಾ.ಮಾ.ಶಿ.ಸಂಘದ ಕಾರ್ಯದರ್ಶಿಗಳಾದ ಶ್ರೀಮತಿ ವಿಜಯಲಕ್ಷ್ಮಿಯವರು ಮಾಡುವುದರ ಮೂಲಕ ಬೈಠಕ್ ಪ್ರಾರಂಭವಾಯಿತು. ರಾಜ್ಯ ಸಹ ಪ್ರಧಾನ ಕಾರ್ಯದರ್ಶಿಗಳಾದ ಗಂಗಾಂಧರಾಚಾರಿ ಅವರು ಬೈಠಕ್‌ನಲ್ಲಿದ್ದು, ಎಲ್ಲರನ್ನು ಸ್ವಾಗತಿಸಿದರು. ನಂತರ ಆಯಾ ಜಿಲ್ಲಾ ಪ್ರಮುಖರು ಕರ್ತವ್ಯಬೋಧ್ ದಿವಸದ ಕಾರ್ಯಕ್ರಮದ ವರದಿಯ ಜೊತೆಯಲ್ಲಿ ಆಯಾ ಜಿಲ್ಲೆಯಲ್ಲಿ ವಿಶೇಷವಾಗಿ ಆಚರಿಸಿದ ಕಾರ್ಯಕ್ರಮಗಳ ಬಗ್ಗೆ ವರದಿ ನೀಡಿದರು.

ಕರ್ನಾಟಕ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಶ್ರೀ ಬಿ.ಸಿ.ನಾಗೇಶ್‌ರವರು ಕಾರ್ಯಕಾರಿಣಿ ಸಭೆಯಲ್ಲಿ ಭಾಗವಹಿಸಿ, ಮಾಧ್ಯಮಿಕ ಶಿಕ್ಷಕ ಸಂಘ ಶೈಕ್ಷಣಿಕ ಕ್ಷೇತ್ರದಲ್ಲಿ ಕಾರ್ಯಮಾಡುತ್ತಿರುವ ವಿಶಿಷ್ಟ ಸಂಘಟನೆಯಾಗಿದ್ದು, ಎನ್.ಇ.ಪಿ–2020ನ್ನು ದೇಶದಲ್ಲಿಯೇ ಕರ್ನಾಟಕ ಮೊದಲು ಜಾರಿಗೆ ತರುತ್ತಿದ್ದು, ಈ ಕಾರ್ಯದಲ್ಲಿ ಮಾಧ್ಯಮಿಕ ಶಿಕ್ಷಕರ ಸಹಕಾರವನ್ನು ಕೋರಿದರು. ನಂತರ ಎಬಿಆರ್‌ಎಸ್‌ಎಂ ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಾನಂದ ಸಿಂಧನಕೇರಾ ಜಿ ದೇಶದಲ್ಲಿಯ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಮತ್ತು ಶಿಕ್ಷಕ ಸನ್ಮಾನ ಕಾರ್ಯಕ್ರಮದ ಬಗ್ಗೆ ಸಭೆಗೆ ವಿವರವನ್ನು ನೀಡಿದರು. ರಾಜ್ಯ ಖಜಾಂಚಿಗಳಾದ ಜೆ.ಎಂ ಜೋಷಿಯವರು ರಾಜ್ಯದ ಸದಸ್ಯತ್ವದ ಬಗ್ಗೆ ಜಿಲ್ಲಾವಾರು ವಿವರವನ್ನು ಸಭೆಗೆ ನೀಡಿದರು. ರಾಜ್ಯ ಮಹಿಳಾ ಪ್ರಮುಖಿಯಾದ ಶ್ರೀಮತಿ ಜಿ ಎನ್ ವಾಸುಕಿಯವರು ಮಹಿಳಾ ಅಭ್ಯಾಸವರ್ಗ ಮತ್ತು ಮಹಿಳಾ ಕಾರ್ಯದ ವಿಸ್ತಾರದ ಬಗ್ಗೆ ಸಭೆಯ ಗಮನಕ್ಕೆ ತಂದರು.

ಶಿಕ್ಷಕರ ಸಮಸ್ಯೆಗಳು ಮತ್ತು ಅವುಗಳಿಗೆ ನಮ್ಮ ಸ್ಪಂದನೆಯ ಬಗ್ಗೆ ರಾಜ್ಯ ಕಾರ್ಯಾಧ್ಯಕ್ಷರಾದ ಶ್ರೀ ಅರುಣ್ ಶಹಾಪುರ ಅವರು ಮಾತನಾಡಿದರು ಮತ್ತು ಇದೇ ಸಂದರ್ಭದಲ್ಲಿ ರಾಜ್ಯದ ಜಿಲ್ಲಾ ಪ್ರತಿನಿಧಿಗಳು ಸಮಸ್ಯೆಗಳನ್ನು ಆಲಿಸಿದರು ಮತ್ತು ಅವರಿಗೆ ಪರಿಹಾರೋಪಾಯಗಳನ್ನು ಸೂಚಿಸಿದರು.

ಶಿಕ್ಷಕ ಸಮಾಚಾರ ಪತ್ರಿಕೆಯ ಬೆಳವಣಿಗೆಗೆ ಮತ್ತು ವಿಸ್ತಾರದ ದೃಷ್ಟಿಯಿಂದ ನಮ್ಮ ಕಾರ್ಯಗಳ ಬಗ್ಗೆ ಎಬಿಆರ್‌ಎಸ್‌ಎಂ ಮಹಿಳಾ ಪ್ರಧಾನ ಕಾರ್ಯದರ್ಶಿಯಾದ ಶ್ರೀಮತಿ ಮಮತ ಡಿ ಕೆಯವರು ಸಭೆಗೆ ವಿವರ ನೀಡಿದರು. ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳಜಿಯವರು ಕುಟುಂಬ ಪ್ರಬೋಧನ ಕಾರ್ಯಕ್ರಮದ ಬಗ್ಗೆ ಮತ್ತು ರಾಜ್ಯದಲ್ಲಿ ಅದನ್ನು ಅನುಷ್ಠಾನದ ದೃಷ್ಟಿಯಿಂದ ಗಮನಿಸಬೇಕಾದ ಅಂಶಗಳ ಬಗ್ಗೆ ಹೇಳಿದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಚಿದಾನಂದ ಪಾಟೀಲ್ ಸ್ವಾತಂತ್ರ್ಯ ಅಮೃತ ಮಹೋತ್ಸವದ ನಿಟ್ಟಿನಲ್ಲಿ ಯೋಜಿಸಿದ್ದು, ನನ್ನ ಶಾಲೆ ನನ್ನ ತೀರ್ಥಕ್ಷೇತ್ರ ಕಾರ್ಯಕ್ರಮದ ತಯಾರಿ ಹಾಗೂ ಎನ್‌ಇಪಿ –2020 ಅನುಷ್ಠಾನದಲ್ಲಿ ನಮ್ಮ ಪಾತ್ರದ ಬಗ್ಗೆ ಸಭೆಗೆ ವಿವರಿಸಿದರು. ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ತಯಾರಿಯ ನಿಮಿತ್ತವಾಗಿ ನಡೆಯುತ್ತಿರುವ ಫೋನ್ ಇನ್ ಕಾರ್ಯಕ್ರಮದ ಯೋಜನೆಯನ್ನು ಮಾಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

ಎಬಿಆರ್‌ಎಸ್‌ಎಂ ರಾಷ್ಟ್ರೀಯ ಸಹ ಸಂಘಟನಾ ಮಂತ್ರಿಗಳಾದ ಶ್ರೀ ಜಿ ಲಕ್ಷ್ಮಣ್‌ಜಿಯವರು ಸಮಾರೋಪದಲ್ಲಿ ಮಾತನಾಡುತ್ತಾ ಶೈಕ್ಷಣಿಕ ಬದಲಾವಣೆಯ ಈ ಪರ್ವ ಕಾಲದಲ್ಲಿ ನಮ್ಮೆಲ್ಲರ ಕರ್ತವ್ಯಗಳ ಬಗ್ಗೆ ಹೇಳುವುದರ ಜೊತೆಯಲ್ಲಿ ಮುಂಬರುವ ಸಂಘಟನೆಯ ಕಾರ್ಯದಲ್ಲಿ ನಮ್ಮ ಪಾತ್ರದ ಬಗ್ಗೆ ಹೇಳಿದರು. ದೇಶದಲ್ಲಿ ನಡೆಯುತ್ತಿರುವ ಚಟುವಟಿಕೆಗಳ ಬಗ್ಗೆ ಮತ್ತು ಕಾರ್ಯದ ವಿಸ್ತಾರದ ನಿಮಿತ್ತ ನಾವು ಮಾಡಬೇಕಾದ ಕಾರ್ಯಗಳ ಬಗ್ಗೆ ಎಲ್ಲ ಕಾರ್ಯಕರ್ತರಿಗೂ ಹೇಳಿದರು. ಕೊನೆಯಲ್ಲಿ ರಾಜ್ಯ ಉಪಾಧ್ಯಕ್ಷರಾದ ಆರ್ ಕೊಟ್ರಪ್ಪಾಜಿ ವಂದನಾರ್ಪಣೆ ಸಲ್ಲಿಸಿದರು ಮತ್ತು ಕೊನೆಯಲ್ಲಿ ಶ್ರೀ ಸುರೇಂದ್ರರವರು ಶಾಂತಿಮಂತ್ರ ಹೇಳುವುದರೊಂದಿಗೆ ರಾಜ್ಯ ಕಾರ್ಯಕಾರಿಣಿ ಸಭೆ ಮುಕ್ತಾಯವಾಯಿತು. ●

# ಕಲಬುರ್ಗಿ ಫೋನ್‌ಇನ್ ಕಾರ್ಯಕ್ರಮ – ಶಿಕ್ಷಕರ ನಿಸ್ವಾರ್ಥ ಸೇವೆ ಶ್ಲಾಘನೀಯ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಜಿಲ್ಲಾ ಘಟಕ, ಜ್ಞಾನಾಮೃತ ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ಕೇಂದ್ರ, ಆರ್ ಜೆ ಪಿಯು ಕಾಲೇಜ್ ಆಶ್ರಯದಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಹೆಚ್ಚಳಕ್ಕೆ ಪೂರಕವಾಗಿ ನಗರದ ಆರ್ ಜೆ ಪದವಿ ಪೂರ್ವ ವಿಜ್ಞಾನ ಕಾಲೇಜಿನಲ್ಲಿ ಪೋನ್ ಇನ್ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಮಾಜಿ ಎಂಎಲ್‌ಸಿ ಅಮರನಾಥ ಪಾಟೀಲ್, ವಿದ್ಯಾರ್ಥಿಗಳನ್ನು ಉತ್ತಮ ಫಲಿತಾಂಶದ ಕಡೆಗೆ ಕರೆದೊಯ್ಯುವ ನಿಟ್ಟಿನಲ್ಲಿ ಶಿಕ್ಷಕರು ಸ್ವಯಂ ಪ್ರೇರಿತವಾಗಿ ಕೈಗೊಂಡಿರುವ ಕಾರ್ಯಕ್ರಮ ಇದಾಗಿದೆ. ಶಾಲಾ ಅವಧಿಯ ನಂತರ ತಮ್ಮ ವೈಯಕ್ತಿಕ ಕೆಲಸಗಳ ಮಧ್ಯೆಯೂ ಎಸ್ಸೆಸ್ಸೆಲ್ಸಿ ಮಕ್ಕಳ ಫಲಿತಾಂಶ ಹೆಚ್ಚಳಕ್ಕಾಗಿ ತಮ್ಮ ಸಮಯವನ್ನು ನೀಡಿ, ನಿಸ್ವಾರ್ಥ ಸೇವೆ ಗೈಯುತ್ತಿರುವ ಹಾಗೂ ಇಲಾಖೆಯ ಅಧಿಕಾರಿಗಳು ಜೊತೆಗೆ ಕೈಜೋಡಿಸಿರುವ ಕಾರ್ಯ ಶ್ಲಾಘನೀಯ ಎಂದು ಹೇಳಿದರು.

ಡಿಡಿಪಿಐ ಅಶೋಕ ಭಜಂತ್ರಿ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಎಸ್ಸೆಸ್ಸೆಲ್ಸಿ ಫಲಿತಾಂಶ ಎಂಬುದು ಒಂದು ಅತ್ಯಂತ ಪ್ರಮುಖ ಘಟ್ಟ ಹಾಗಾಗಿ ವಿದ್ಯಾರ್ಥಿಗಳೊಟ್ಟಿಗೆ ಪೋಷಕರನ್ನು ಒಳಗೊಂಡಂತೆ ಫಲಿತಾಂಶ ಸುಧಾರಣೆಗೆ ಪ್ರಯತ್ನ ಮಾಡಲಾಗುತ್ತಿದೆ. ಇದಕ್ಕೆ ಪೂರಕವೆಂಬಂತೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಆಯೋಜನೆ ಮಾಡಿರುವ ಫೋನ್ ಇನ್ ಕಾರ್ಯಕ್ರಮ ನಮ್ಮ ಜಿಲ್ಲೆಯ ಫಲಿತಾಂಶ ಹೆಚ್ಚಿಸುವಲ್ಲಿ ಸಹಕಾರಿಯಾಗಲಿದೆ ಎಂದು ಅಭಿಪ್ರಾಯಟ್ಟರು. ಆರ್.ಜೆ ಪಿಯು ಕಾಲೇಜಿನ ಪ್ರಾಂಶುಪಾಲ್ ಡಾ॥ ಪ್ರಹ್ಲಾದ ಭುರ್ಲಿ ಮಾತನಾಡಿ, ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡು ಫಲಿತಾಂಶದಲ್ಲಿ ಪ್ರಗತಿ ಕಾಣಬೇಕು ಎಂದು ಸಲಹೆ ನೀಡಿದರು. ವಿಭಾಗ ಪ್ರಮುಖ ಮಹೇಶ ಬಸರಕೋಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಿವೈಪಿಸಿ ಸಿ.ಬಿ. ಪಾಟೀಲ್, ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿ ರಮೇಶ್ ಜಾನಕರ್, ಚಂದ್ರಶೇಖರ್ ಗೋಸಾಲ್ ಚಂದ್ರಶೇಖರ್ ಪಾಟೀಲ್ ಇತರರಿದ್ದರು. ●

# ವಿವಿಧೆಡೆಗಳಲ್ಲಿ ಸಂಕಲ್ಪ ದಿನಾಚರಣೆ

## ಬೆಂಗಳೂರು ಉತ್ತರ ಜಿಲ್ಲೆ

ದಿನಾಂಕ: 23–10–2022 ರ ಭಾನುವಾರ ಸಂಜೆ 6–30ಕ್ಕೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಅಂತರ್ಜಾಲದ ಮುಖಾಂತರ ಸ್ವಾಮಿ ವಿವೇಕಾನಂದರು ಮತ್ತು ನೇತಾಜಿ ಸುಭಾಷ್ ಚಂದ್ರಬೋಸ್‌ರವರ ಸ್ಮರಣೆಗಾಗಿ ಆಯೋಜಿಸಿದ್ದ ಸಂಕಲ್ಪ ದಿನಾಚರಣೆಯು ಶಿಕ್ಷಕಿ ಶ್ರೀಮತಿ ಸಿದ್ಧಗಂಗಮ್ಮರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು.

ಬೆಂಗಳೂರು ಉತ್ತರ ವಲಯ–3 ರ ಕಾರ್ಯದರ್ಶಿ ಶ್ರೀ ಎಂ.ವಿ ಗಂಗಾಧರರವರು ಮುಖ್ಯವಕ್ತಾರರ ಪರಿಚಯದೊಂದಿಗೆ ಸಭೆಗೆ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿದರು. ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಸಂಘದ ರಾಜ್ಯ ಕೋಶಾಧ್ಯಕ್ಷರಾದ ಶ್ರೀ ಜೆ.ಎಂ ಜೋಷಿರವರು ಸಂಘ ಬೆಳೆದು ಬಂದ ಹಾದಿ, ಸಂಘದ ಕಾರ್ಯ ಚಟುವಟಿಕೆಗಳನ್ನು ವಿವರವಾಗಿ ತಿಳಿಸಿದರು.

ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಚಿದಾನಂದ ಪಾಟೀಲರು ಸಂಕಲ್ಪ ಬೋಧನೆ ನಡೆಸಿಕೊಟ್ಟರು. ಕಾರ್ಯಕ್ರಮದ ಮುಖ್ಯ ವಕ್ತಾರರು, ಸಂಘದ ಹಿರಿಯ ಕಾರ್ಯಕರ್ತರು, ನಿಖಟವರ್ತಿಗಳಾದ ಹಾಗೂ ಬಸವನಗುಡಿಯ ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜಿನ ನಿವೃತ್ತ ಉಪಪ್ರಾಂಶುಪಾಲರಾಗಿದ್ದ ಶ್ರೀಮತಿ ಆರ್ ಸೀತಾಲಕ್ಷ್ಮಿಯವರು ಸಂಕಲ್ಪ ಒಂದು ದೃಢತೆಯನ್ನು ಸೂಚಿಸುವ ಶಬ್ದ, ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಬೇಕಾದರೆ ಸಂಕಲ್ಪ ಮಾಡುವುದು ತುಂಬಾ ಮುಖ್ಯ, ವೃತ್ತಿಯಲ್ಲಿ ಶಿಕ್ಷಕರಾಗಿ ಪ್ರವೃತ್ತಿಯಲ್ಲಿ ವಿದ್ಯಾರ್ಥಿಗಳಲ್ಲಿ ಮೌಲ್ಯಗಳನ್ನು ಬೆಳೆಸುವ ಕಾಯಕ ಶಿಕ್ಷಕರದು. ವಿದ್ಯಾರ್ಥಿಗಳಲ್ಲಿ ನಾಳಿನ ಕನಸನ್ನು ಬಿತ್ತೋಣ, ನವಭಾರತದ ನಿರ್ಮಾಣ ಮಾಡೋಣ ಎಂದು ಎಲ್ಲರನ್ನು ಪ್ರೇರೇಪಿಸಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳ, ಹಿರಿಯ ಪೋಷಕರಾದ ಶ್ರೀ ಹೆಚ್ ನಾಗಭೂಷಣರಾವ್‌ರವರು, ವಿವಿಧ ಜಿಲ್ಲೆಗಳ ಅಧ್ಯಕ್ಷರು, ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಹಾಜರಿದ್ದು ಯಶಸ್ವಿಗೊಳಿಸಿದರು. ಸಂಘದ ಜಿಲ್ಲಾಧ್ಯಕ್ಷರಾದ ಶ್ರೀ ಗಂಗಪ್ಪರವರು ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಶಾಂತಿಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ವರದಿ : ಎಂ.ವಿ. ಗಂಗಾಧರ,** ಕಾರ್ಯದರ್ಶಿ, ಬೆಂ. ಉತ್ತರ ವಲಯ–3

## ಬೆಳಗಾವಿ

ನಗರದ ಮಹಿಳಾ ವಿದ್ಯಾಲಯ ಪ್ರೌಢಶಾಲೆಯ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಸಂಕಲ್ಪ ದಿನ ಆಚರಿಸಲಾಯಿತು. ವಿಧಾನ ಪರಿಷತ್ ಸದಸ್ಯ ಸಾಬಣ್ಣ ತಳವಾರ ಅವರು ಮಾತನಾಡಿ, ಸ್ವಾಮಿ ವಿವೇಕಾನಂದರ ಆದರ್ಶ ಜೀವನ ಎಲ್ಲರಿಗೂ ದಾರಿದೀಪ. ಅವರ ಅಮೂಲ್ಯ ತತ್ವವಾಣಿಯನ್ನು ಇಂದಿನ ಶಿಕ್ಷಕರು, ವಿದ್ಯಾರ್ಥಿಗಳು ಅನುಸರಿಸುವಂತಾಗಬೇಕು ಎಂದರು. ಡಿಡಿಪಿಐ ಬಸವರಾಜ ನಾಲತವಾಡ, ಕ್ಷೇತ್ರ ಶಿಕ್ಷಣಾಧಿಕಾರಿ ರವಿ ಭಜಂತ್ರಿ, ಮಾಧ್ಯಮಿಕ ಶಿಕ್ಷಕ ಸಂಘದ ಉಪಾಧ್ಯಕ್ಷರಾದ ಶ್ರೀಮತಿ ರೋಹಿಣಿ ದೇಶಪಾಂಡೆ, ಮಹಿಳಾ ಪ್ರಮುಖ ನವೀನಾ ಶೆಟ್ಟಿಗಾರ, ಆರ್.ಪಿ ವಂಟಗೋಡಿ ಮತ್ತಿತರರು ಉಪಸ್ಥಿತರಿದ್ದರು.

## ಹುಬ್ಬಳ್ಳಿ

ಸಾಲಮುಕ್ತ, ಶಿಕ್ಷಣಯುಕ್ತ, ಆರೋಗ್ಯಯುಕ್ತ, ಭಾರತದ ಕನಸನ್ನು ನಾವು ಕಾಣಬೇಕು. ಅಂತಹ ಭಾರತ ನಿರ್ಮಿಸಲು ಶಿಕ್ಷಕರ ಪರಿಶ್ರಮದ ಅಗತ್ಯ ಎಂದು ಆರ್‌ಎಸ್‌ಎಸ್ ಪ್ರಾಂತ ಕಾರ್ಯಕಾರಿಣಿ ಸದಸ್ಯ ಶ್ರೀಧರ ನಾಡಿಗೇರ ಹೇಳಿದರು. ನಗರದ ಜಾಬಿನ ವಿಜ್ಞಾನ ಮಹಾವಿದ್ಯಾಲಯದ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ ಮತ್ತು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಬುಧವಾರ ನಡೆದ ಕಾಯಕ ಸಂಕಲ್ಪ ದಿನ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಂಡು ಮಾತನಾಡಿ ಶಿಕ್ಷಕರಾದವರು ದೇಶಕ್ಕೆ ಏನುಬೇಕಾಗಿದೆ ಎಂಬುದನ್ನು ತಿಳಿದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬೇಕಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಾಬಿನ ಮಹಾವಿದ್ಯಾಲಯದ ಪ್ರಾಚಾರ್ಯ ಡಾ|| ಲಿಂಗರಾಜ ಹೊರಕೇರಿ ಮಾತನಾಡಿದರು. ಕರ್ನಾಟಕ ರಾಜ್ಯ ಮಹಾವಿದ್ಯಾಲಯಗಳ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷ ರಘು ಅಕಮಂಚಿ, ಬಸವರಾಜ ದೇವರಮನಿ, ವಿವಿಧ ಮಹಾವಿದ್ಯಾಲಯಗಳ ಉಪನ್ಯಾಸಕರು ಉಪಸ್ಥಿತರಿದ್ದರು. ಜ್ಯೋತಿ ಕದಂ ಹಾಗೂ ಸಂಗಡಿಗರು ಸ್ವಾಗತ ಗೀತೆ ಹಾಡಿದರು. ಯಶೋಧಾ ತಾಂಬೆ ಸಂಗಡಿಗರು ಪ್ರಾರ್ಥಿಸಿದರು. ಡಾ|| ಎಸ್.ಟಿ ಮೀಸಿ ಸ್ವಾಗತಿಸಿದರು. ಡಾ|| ಗುರುನಾಥ ಬಡಿಗೇರ ಪ್ರಾಸ್ತಾವಿಕವಾಗಿ ಮಾತನಾಡಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷ ಪ್ರೊ|| ಸಂದೀಪ ಬೂದಿಹಾಳ ಪರಿಚಯಿಸಿದರು. ಸಂಗೀತಾ ಕಟ್ಟಿಮನಿ ಕರ್ತವ್ಯ ಬೋಧನೆ ಮಾಡಿದರು. ಶ್ರೀಧರ ಪಾಟೀಲ ವಂದಿಸಿದರು.

## ಬೆಂಗಳೂರು ದಕ್ಷಿಣ ಜಿಲ್ಲೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ದಕ್ಷಿಣ ಜಿಲ್ಲೆಯ ವತಿಯಿಂದ ಸಂಕಲ್ಪ ದಿನಾಚರಣೆಯನ್ನು ದಿನಾಂಕ 22–01–2022 ರಂದು ಆನ್ಲೈನ್ ಮೂಲಕ ಆಚರಿಸಲಾಯಿತು. ಮುಖ್ಯ ವಕ್ತಾರರಾಗಿ ಪ್ರೊಫೆಸರ್ ಗಿರಿಧರ ಉಪಾಧ್ಯಾಯರವರು ಈ ಸಂದರ್ಭದಲ್ಲಿ ಇಬ್ಬರು ಮಹಾಪುರುಷರಾದ ನೇತಾಜಿ ಸುಭಾಷ್ ಚಂದ್ರ ಬೋಸ್ ಮತ್ತು ಸ್ವಾಮಿ ವಿವೇಕಾನಂದರ ಜೀವನದ ಸಾಧನೆಗಳ ಘಟನೆಗಳನ್ನು ಅದ್ಭುತವಾಗಿ ತಿಳಿಸಿಕೊಟ್ಟರು. ಬ್ರಿಟೀಷರು ಭಾರತಕ್ಕೆ ಬಹುಬೇಗ ಸ್ವಾತಂತ್ರ್ಯ ನೀಡಲು ಕಾರಣ ಸುಭಾಷ್ ಚಂದ್ರಬೋಸ್ ಅವರ ಒತ್ತಡ ತಂತ್ರ. ದೇಶಕ್ಕೆ ಶೀಘ್ರವಾಗಿ ಸ್ವಾತಂತ್ರ್ಯವನ್ನು ನೀಡುವಂತೆ ಹೋರಾಟದ ಕಹಳೆಯನ್ನು ಮೊಳಗಿಸಿದ್ದಲ್ಲದೆ ವಿದೇಶಗಳಿಗೆ ಹೋಗಿ ಅಲ್ಲಿನ ನಾಯಕರನ್ನು ಸಂಪರ್ಕಿಸಿ, ಅವರ ಮನವೊಲಿಸಿ ಸೇನೆಯನ್ನು ಕಟ್ಟಿ ಬ್ರಿಟಿಷರಿಗೆ ಸಿಂಹಸ್ವಪ್ನರಾದರು.

1943 ರಲ್ಲಿ ಅಕ್ಟೋಬರ್ 21 ರಂದು ಸಿಂಗಪುರದಲ್ಲಿ ಮೊದಲ ಬಾರಿಗೆ ಸರ್ಕಾರವನ್ನು ರಚಿಸಿ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನವನ್ನು ಸ್ವೀಕರಿಸಿದರು ಎಂಬ ಅಂಶವನ್ನು ಎಳೆ ಎಳೆ ಎಳೆಯಾಗಿ ಬಿಡಿಸಿ ಹೇಳಿದರು. ರಾಷ್ಟ್ರಭಕ್ತ ಹಾಗೂ ವೀರಸಂತರಾದ ಸ್ವಾಮಿ ವಿವೇಕಾನಂದರು ಭಾರತ ಮಾತೆಯನ್ನೇ ಆರಾಧ್ಯ ದೈವನ್ನಾಗಿಸಿಕೊಂಡು ಭಾರತೀಯ ಸನಾತನ ಪರಂಪರೆ ಮತ್ತು ಅಧ್ಯಾತ್ಮತತ್ವದ ದರ್ಶನವನ್ನು ಇಡಿ ಪ್ರಪಂಚಕ್ಕೆ ಮಾಡಿಸಿ ಈ ನಾಡಿನ ಘನತೆಯನ್ನು ಹೆಚ್ಚಿಸಿದ ಮಹಾಮಹಿಮರು. ಇಂದು ನಾವು ಯಾವ ಸಮಾಜಲ್ಲಿದ್ದೇವೋ ಆ ಸಮಾಜದಿಂದಲೇ ಜೀವನ. ಅಂತಹ ಸಮಾಜವನ್ನು ನಾವು ಮರೆಯುತ್ತಿರುವುದು ದುರದೃಷ್ಟಕರ. ಭೂಮಿ ಮತ್ತು ಮಾತೃಭೂಮಿಗೆ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕು.

ಪುಟ 9 ಕ್ಕೆ ➢

➢ ಪುಟ 8 ರಿಂದ.....

ಇಂದಿನ ಯುವ ಜನತೆಗೆ ದೇಶದ ಮೌಲ್ಯ, ಸೇವಾಮೌಲ್ಯ, ಸಂಬಂಧದ ಮೌಲ್ಯ, ಸಾಂಸ್ಕೃತಿಕ ಮೌಲ್ಯ, ಆಹಾರ ಪದ್ಧತಿಯ ಮೌಲ್ಯಗಳನ್ನು ತಿಳಿಸುವುದರ ಜೊತೆಗೆ ಅವರು ಈ ಎಲ್ಲ ಮೌಲ್ಯಗಳನ್ನು ರೂಢಿಸಿಕೊಳ್ಳುವಂತೆ ಪ್ರೇರಣೆ ನೀಡಬೇಕೆಂದು ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ್ ಅವರು ಪ್ರಾಸ್ತಾವಿಕ ನುಡಿಯಲ್ಲಿ ಸಂಘದ ಧ್ಯೇಯೋದ್ದೇಶ, ಸಂಘ ನಡೆದು ಬಂದ ದಾರಿ ಮತ್ತು ಅಮೃತ ಸ್ವಾತಂತ್ರ್ಯ ಮಹೋತ್ಸವದ ವರ್ಷದಲ್ಲಿ ಸಂಘದ ಹೊಸ ಯೋಜನೆ "ನನ್ನ ಶಾಲೆ ನನ್ನ ತೀರ್ಥ ಕ್ಷೇತ್ರ" ಇದರ ಪರಿಕಲ್ಪನೆಯನ್ನು ತಿಳಿಸಿದರು. ಕೆ.ಆರ್.ಎಂ.ಎಸ್.ಎಸ್. ನ ರಾಜ್ಯ ಕೋಶಾಧ್ಯಕ್ಷರಾದ ಶ್ರೀ ಜೆ.ಎಂ. ಜೋಶಿರವರು ಸಂಕಲ್ಪ ಬೋಧನೆಯನ್ನು ಮಾಡಿದರು. ಶ್ರೀಮತಿ ಮಾಯಾ ಪ್ರಭು ಜಿಲ್ಲಾ ಮಹಿಳಾ ಪ್ರಮುಖ್ ಪ್ರಾರ್ಥನೆ ಮಾಡಿದರು. ಶ್ರೀ ಬಿ. ಎ.ಸುರೇಂದ್ರ, ಜಿಲ್ಲಾಧ್ಯಕ್ಷರು ಸ್ವಾಗತ ಪರಿಚಯ ಮಾಡಿದರು. ಶ್ರೀ ವೆಂಕಟರಮಣ ದೇವರು ಭಟ್ಟ ರವರು ವಂದನಾರ್ಪಣೆ ಮಾಡಿದರು. ಶ್ರೀಮತಿ ಜಿ.ಎನ್.ವಾಸುಕಿ ರಾಜ್ಯ ಮಹಿಳಾ ಪ್ರಮುಖ್ ರವರು ಶಾಂತಿಮಂತ್ರವನ್ನು ಹೇಳಿದರು.

ವರದಿ: **ವೆಂಕಟರಮಣ ದೇವರು ಭಟ್ಟ**

## ಫೋನ್ ಇನ್ ಕಾರ್ಯಕ್ರಮ – ಬೆಳಗಾವಿ

ದಿನಾಂಕ 15/2/2022 ರಂದು ಸಾಯಂಕಾಲ 4 ಗಂಟೆಗೆ ಉಪ ನಿರ್ದೇಶಕರ ಕಾರ್ಯಾಲಯ ಬೆಳಗಾವಿ ಇಲ್ಲಿ ಎಸ್.ಎಸ್.ಎಲ್ ಸಿ ವಿದ್ಯಾರ್ಥಿಗಳಿಗಾಗಿ ನಡೆಸುವ ಫೋನ್ ಇನ್ ಕಾರ್ಯಕ್ರಮದ ಉದ್ಘಾಟನೆ ಜರುಗಿತು.

ಕಾರ್ಯಕ್ರಮದಲ್ಲಿ ಉಪನಿರ್ದೇಶಕರಾದ ಶ್ರೀ ಬಸವರಾಜ ನಲಟವಾಡ್, ಯೋಜನಾಧಿಕಾರಿ ಶ್ರೀ ಬಸವರಾಜ ಮಿಲ್ಲಾನಟ್ಟಿ, ಜಿಲ್ಲಾ ಶಿಕ್ಷಣಾಧಿಕಾರಿಗಳಾದ ಶ್ರೀ ಹೂಗಾರ, ಶ್ರೀ ಪಾಟೀಲ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ವಿಶ್ವಜೀತ್ ಹಸ್‌ಬೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಶ್ರೀ ಡಾ॥ ವಂಟಗೋಡಿ ರಾಜ್ಯ ಉಪಾಧ್ಯಕ್ಷ ಶ್ರೀಮತಿ ರೋಹಿಣಿ ನಾಯಕ್, ಜಿಲ್ಲಾ ಕಾರ್ಯದರ್ಶಿ ಶ್ರೀ ಉಮೇಶ್ ಕುಲಕರ್ಣಿ, ಮಹಿಳಾ ಪ್ರಮುಖ ಡಾ॥ನವೀನ ಶೆಟ್ಟೀಗಾರ್, ನಗರ ಘಟಕದ ಅಧ್ಯಕ್ಷ ಶ್ರೀ ಸಂಜೀವ ಕೋಷ್ಟಿ ಹಾಗೂ ನಗರ ಹಾಗೂ ಜಿಲ್ಲಾ ಘಟಕದ ಎಲ್ಲ ಪದಾಧಿಕಾರಿಗಳು ಉಪಸ್ಥಿತರಿದ್ದರು. ಕನ್ನಡ, ಮರಾಠಿ, ಇಂಗ್ಲೀಷ್ ಮಾಧ್ಯಮದ ಎಲ್ಲ ಸಂಪನ್ಮೂಲ ಶಿಕ್ಷಕರು ಹಾಜರಿದ್ದರು. ಕಾರ್ಯಕ್ರಮದಲ್ಲಿ 100 ಕ್ಕೂ ಹೆಚ್ಚು ಶಿಕ್ಷಕರು ಹಾಜರಿದ್ದರು.

## ಫೋನ್ ಇನ್ ಕಾರ್ಯಕ್ರಮ – ಬಳ್ಳಾರಿ

ದಿನಾಂಕ 17/2/2022ರಂದು ಬಳ್ಳಾರಿ ಜಿಲ್ಲಾ ಮಾಧ್ಯಮಿಕ ಶಿಕ್ಷಕ ಸಂಘದಿಂದ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಫೋನ್ ಇನ್ ನೇರ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಈ ಕಾರ್ಯಕ್ರಮದಲ್ಲಿ ರಾಜ್ಯ ಕಾರ್ಯದರ್ಶಿಗಳಾದ ಎ. ಗುಂಡಾಚಾರ್ ಹಾಗೂ ಜಿಲ್ಲಾ ಅಧ್ಯಕ್ಷರಾದ ಯು. ರಮೇಶ್ ಹಾಗೂ ಕಾರ್ಯದರ್ಶಿಗಳಾದ ಪಿ ನರಸನಗೌಡ ಹಾಗೂ ವಿವಿಧ ಶಾಲೆಗಳ ಶಿಕ್ಷಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

●

➢ ಪುಟ 4 ರಿಂದ.....

- ಅನೇಕ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯ SEDG's ಗಳೂ ಇರುತ್ತವೆ. ಈ ತರಹದ ವಲಯಗಳನ್ನು ವಿಶೇಷ ಶಿಕ್ಷಣ ವಲಯಗಳಾಗಿ (S.E.Z) ಪ್ರಯತ್ನ ಮಾಡಲು ಸೂಚಿಸಿದೆ.
- ಎಸ್.ಜಿ.ಡಿ.ಜಿ ಗಳಲ್ಲಿ ವಿದ್ಯಾರ್ಥಿಗಳಿಗಾಗಿ ನೀತಿ ರೂಪಿಸುವಾಗ ಅಲ್ಲಿ ವಿದ್ಯಾರ್ಥಿನಿಯರಿಗೆ ವಿಶೇಷ ಆದ್ಯತೆ ನೀಡುವುದು. ಭವಿಷ್ಯತ್ತಿನಲ್ಲಿ ಹೆಣ್ಣು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಸಹಾಯಕವಾಗುತ್ತದೆ. ಅದಲ್ಲದೆ ಹೆಣ್ಣು ಮಕ್ಕಳ ಮತ್ತು ತೃತೀಯ ಲಿಂಗ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು **"ಲಿಂಗ ಸೇರ್ಪಡೆ ನಿಧಿ"** (Gender Inclusion Fund**"**) ಸ್ಥಾಪಿಸಿ ಹೆಣ್ಣು ಮಕ್ಕಳ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಹೇಳಿದೆ. ವೃತ್ತಿಪರ ಶಿಕ್ಷಣವನ್ನು ಒಳಗೊಂಡಂತೆ ಈ ಗುಂಪಿನ ಮಕ್ಕಳಲ್ಲಿ ಉಳಿದಿರುವ ಅಸಮಾನತೆಯನ್ನು ತೊಡೆದು ಹಾಕಲು **"ಸೇರ್ಪಡೆ ನಿಧಿ"** **"**Inclusion Fund**"** ಯೋಜನೆಯನ್ನು ಅಭಿವೃದ್ಧಿ ಪಡಿಸಲು ಸೂಚಿಸಿದೆ.
- ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಮಕ್ಕಳ ಅನುಕೂಲತೆ ಮತ್ತು ಸುರಕ್ಷತೆಯ ದೃಷ್ಟಿಯಿಂದಾಗಿ ನವೋದಯ ಮತ್ತು ಕಸ್ತೂರ ಬಾ ಗಾಂಧಿ ಬಾಲಿಕಾ ವಿದ್ಯಾಲಯದಂತಹ ವಸತಿ ಶಾಲೆಗಳನ್ನು ಅಭಿವೃದ್ಧಿಪಡಿಸಲು ಗಮನ ನೀಡಿದೆ.
- ವಿಕಲ ಚೇತನ (Disabilities Childrens) ಮಕ್ಕಳಿಗೆ ಶಿಕ್ಷಣದ ಪ್ರಗತಿಗಾಗಿ ಅಗತ್ಯವಿರುವ ಕಡೆಗೆ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಲು ಮತ್ತು The Rights of persons with Disabilities (RPWD) Act–2016 ರ ಪ್ರಕಾರ ಇತರೆ ವಿದ್ಯಾರ್ಥಿಗಳ ಜೊತೆಯಲ್ಲಿ ಸೂಕ್ತ ಬದಲಾವಣೆಯೊಂದಿಗೆ ಗುಣಮಟ್ಟದ ಶಿಕ್ಷಣ ನೀಡುವುದು. ಶಾಲೆ ಮತ್ತು ಶಾಲಾ ಸಂಕೀರ್ಣಗಳಲ್ಲಿಯು ಸಹ ಅಂಗವೈಕಲ್ಯ ಪ್ರಕಾರಗಳಲ್ಲಿ ತರಬೇತಿ ಪಡೆದ ವಿಶೇಷ ಶಿಕ್ಷಕರನ್ನು ನೇಮಿಸುವುದರ ಜೊತೆಗೆ ಶಾಲಾ ತರಗತಿಗಳನ್ನು ಅನುಕೂಲಕರವಾಗಿ ರೂಪಿಸುವುದು ಹಾಗೂ ಶಾಲೆಯ ಎಲ್ಲ ದೈನಂದಿನ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ನೋಡಿಕೊಳ್ಳುವುದು ಮತ್ತು ಅವಶ್ಯವಿರುವ ವಿಕಲಚೇತನ ಮಕ್ಕಳ ಗೃಹ ಆಧಾರಿತ ಶಿಕ್ಷಣಗಳ ವ್ಯವಸ್ಥೆಯನ್ನು ಮಾಡಬೇಕು. ಕಲಿಕಾ ನ್ಯೂನತೆ ಹೊಂದಿದ ಮಕ್ಕಳಿಗೆ ಸಮಾನ ಅವಕಾಶ ಮತ್ತು ಪ್ರವೇಶಗಳನ್ನು ನೀಡಬೇಕು. ರಾಷ್ಟ್ರೀಯ ಮೌಲ್ಯಾಂಕನ ಕೇಂದ್ರವಾದ (PARAKH) performance Assessment Review and Analysis of Knowledge for Holistic Development) ದಂತ ಮೌಲ್ಯಮಾಪನ ಏಜೆನ್ಸಿಗಳು ಸೂಕ್ತ ಮಾರ್ಗಸೂಚಿಯನ್ನು ರೂಪಿಸಬೇಕು ಎಂದು ಹೇಳಿದೆ.
- ಉನ್ನತ ಶಿಕ್ಷಣದಲ್ಲಿಯು ಸಾಮಾಜಿಕ ಮತ್ತು ಆರ್ಥಿಕ ಹಿಂದುಳಿದ ಮಕ್ಕಳ ಪ್ರಾತಿನಿಧ್ಯ ಹೆಚ್ಚಬೇಕು. ಅದಕ್ಕಾಗಿ ಪ್ರೋತ್ಸಾಹದಾಯಕ ಕ್ರಮಗಳಾದ ಶಿಷ್ಯವೇತನವನ್ನು ಒಳಗೊಂಡಂತೆ "(Single window System") ಏಕಗವಾಕ್ಷಿ ಯೋಜನೆಯಲ್ಲಿ ಸರಳೀಕೃತ ರೀತಿಯಲ್ಲಿ ದೊರೆಯಬೇಕು ಹಾಗೂ ವಿದ್ಯಾರ್ಥಿಗಳು ಸಂವೇದನಶೀಲರಾಗುವಂತೆ ಪಠ್ಯಕ್ರಮ ರಚನೆಯಾಗಬೇಕೆಂದು NEP-2020 ಅಭಿಪ್ರಾಯಪಟ್ಟಿದೆ.

ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಕಾರ್ಯಾರಂಭವಾಗಿದ್ದು, ಅದಕ್ಕಾಗಿ NEP–2020 ಅನುಷ್ಠಾನ ಕಾರ್ಯಪಡೆ ಒಂದು ಉಪಸಮಿತಿಯನ್ನು ರಚಿಸಿ NEP ಯಲ್ಲಿಯ ಆಶಯದಂತೆ ಸಾಮಾಜಿಕ ಮತ್ತು ಆರ್ಥಿಕ ಹಿಂದುಳಿದ ಪ್ರದೇಶಗಳಲ್ಲಿನ ಮಕ್ಕಳ ಪ್ರಗತಿಗಾಗಿ ಯೋಜನೆ ರೂಪಿಸುವ ಕಾರ್ಯಗಳಲ್ಲಿ ತೊಡಗಿದೆ. SEZಗೆ ಸಂಬಂಧಿಸಿದಂತೆ ಓದುಗರು ತಮ್ಮ ಅಭಿಪ್ರಾಯವನ್ನು ತಿಳಿಸುವಿರೆಂದು ಭಾವಿಸಿಕೊಳ್ಳಬಹುದೆ?

●

# ವಿದ್ಯಾರ್ಥಿ ಜ್ಞಾನ ಮಿತ್ರ

## ಭಾರತರತ್ನ ಸರ್ ಸಿ.ವಿ ರಾಮನ್

ಚಂದ್ರಶೇಖರ್ ವೆಂಕಟರಾಮನ್ ಭಾರತದ ಶ್ರೇಷ್ಠ ವಿಜ್ಞಾನಿಗಳು. ಏಷ್ಯಾದ ಪ್ರಪ್ರಥಮ ನೋಬೆಲ್ ಪಾರಿತೋಷಕ ಪಡೆದ ಸಾಧಕ. ಹಲವಾರು ಸಂಶೋಧನೆಗಳ ಮೂಲಕ ಭಾರತದ ಕೀರ್ತಿ ಪತಾಕೆಯನ್ನು ಹಾರಿಸಿದ ಅಪ್ರತಿಮ ವಿಜ್ಞಾನಿ.

ಬಾಲಕ ರಾಮನ್ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ದ್ವಿತೀಯ ರ್‍ಯಾಂಕ್ ಗಳಿಸಿದರು. ಬಿ.ಎ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿ ಹಾಗೂ ಎಂ.ಎ ಪದವಿಯನ್ನು ಅಚ್ಚುಮೆಚ್ಚಿನ ಭೌತಶಾಸ್ತ್ರದಲ್ಲೇ ಮುಂದುವರೆಸಿದರು. ಸಂಶೋಧನಾತ್ಮಕ ಪ್ರಯೋಗಗಳ ಮೂಲಕ ಬೆಳಕಿನ ವಿಭಜನೆಯನ್ನು ಕಂಡುಹಿಡಿದು ಸೂರ್ಯನ ಬೆಳಕು ಏಳು ಬಣ್ಣಗಳಿಂದ ಕೂಡಿದೆ. ಪಾರದರ್ಶಕ ವಸ್ತುವಿನಿಂದ ಬೆಳಕು ಹಾದುಹೋದಾಗ ಬೆಳಕಿನ ವಿಭಜನೆ ನೋಡಬಹುದು ಎಂಬುದನ್ನು ವಿಶ್ವಕ್ಕೆ ತಿಳಿಸಿದರು.

ಬೆಳಕಿನ ಕಿರಣಗಳೆಂದರೆ ಫೋಟಾನ್‌ಗಳ ಪ್ರವಾಹ, ಈ ಫೋಟಾನ್‌ಗಳು ರಾಸಾಯನಿಕ ದ್ರವದಲ್ಲಿನ ಅಣುವಿಗೆ ಢಿಕ್ಕಿ ಹೊಡೆದಾಗ ಫೋಟಾನ್‌ನ ಶಕ್ತಿ ಉಂಟಾಗುವ ವಿಶೇಷ ರೇಖೆಗಳೇ 'ರಾಮನ್ ಎಫೆಕ್ಟ್'. ಇದರಿಂದ ರಾಸಾಯನಿಕ ಉದ್ಯಮದಲ್ಲಿ ಪ್ಲಾಸ್ಟಿಕ್‌ಗಳು, ಕಲರ್ ಫೋಟೋಗ್ರಾಫ್ ಮತ್ತು ಸಿಂಥೆಟಿಕ್ ರಬ್ಬರ್ ತಯಾರಿಸಲು ಸಾಧ್ಯವಾಗಿದೆ.

ರಾಮನ್‌ರು ತಮ್ಮ 30ನೇ ವಯಸ್ಸಿನಲ್ಲಿ ಇಂಗ್ಲೆಂಡಿನ ರಾಯಲ್ ಸೊಸೈಟಿ ಫೆಲೋಶಿಪನ್ನು ಪಡೆದರು. 1928 ರ ಫೆಬ್ರವರಿ 28ರಂದು ರಾಮನ್‌ರು 'ರಾಮನ್ ಎಫೆಕ್ಟ್' ಕಂಡು ಹಿಡಿದರು. ಭಾರತದಲ್ಲಿ ಈ ದಿನವನ್ನು 'ರಾಷ್ಟ್ರೀಯ ವಿಜ್ಞಾನ ದಿನ'ವನ್ನಾಗಿ ಆಚರಿಸಲಾಗುತ್ತಿದೆ. ಭೌತವಿಜ್ಞಾನಿಗಳಿಗೆ ನೀಡುತ್ತಿದ್ದ ನೋಬೆಲ್ ಪ್ರಶಸ್ತಿಯನ್ನು ಇಂಗ್ಲೆಂಡ್ ಸರ್ಕಾರ ಹಾಗೂ 'ಸರ್' ಎಂಬ ಪದವಿಯನ್ನು ಬ್ರಿಟಿಷ್ ಸರ್ಕಾರ ನೀಡಿತು.

ಸರ್‌ಸಿ.ವಿ ರಾಮನ್‌ರು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಈ ಮಹಾನ್ ಚೇತನಕ್ಕೆ ಮರಣೋತ್ತರ 'ಭಾರತರತ್ನ' ಪ್ರಶಸ್ತಿಯನ್ನು 1954ರಲ್ಲಿ ಭಾರತ ಸರ್ಕಾರ ನೀಡಿ ಗೌರವಿಸಿತು. ಇಂತಹ ಶ್ರೇಷ್ಠ ಪ್ರತಿಭೆಗೆ ಭಾರತೀಯರಾದ ನಾವು ನಮನಗಳನ್ನು ಸಲ್ಲಿಸೋಣ.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

# ಭಾರತ ಪರಿಚಯ

**ಜೆ. ಎಂ. ಜೋಶಿ**
**ರಾಜ್ಯ ಕೋಶಾಧ್ಯಕ್ಷರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



## ಒಂದಿಷ್ಟು ಇತಿಹಾಸ

1. 'ಪಂಜಾಬಿನ ಕೇಸರಿ' ಎಂದು ಪ್ರಸಿದ್ಧರಾಗಿದ್ದ ಸ್ವಾತಂತ್ರ್ಯ ಹೋರಾಟಗಾರರು ಯಾರು?
2. 'ಉಕ್ಕಿನ ಮನುಷ್ಯ' ಎಂದು ಯಾವ ಸ್ವಾತಂತ್ರ್ಯ ಹೋರಾಟಗಾರರನ್ನು ಕರೆಯುವರು?
3. ಪ್ರಾಚೀನ ಭಾರತದ ರಾಜಧಾನಿ ಯಾವುದಾಗಿತ್ತು?
4. 'ದೇವನಾಂಪ್ರಿಯ' ಎಂಬ ಹೆಸರು ಯಾವ ದೊರೆಗಿತ್ತು?
5. ಭಾರತೀಯ ಸಂವಿಧಾನ ಶಿಲ್ಪಿ ಎಂದು ಯಾರನ್ನು ಕರೆಯುವರು?

## ಜ್ಞಾನ ವಿಜ್ಞಾನ

1. ಸಂಪೂರ್ಣವಾಗಿ ಸಂಸ್ಕೃತದಲ್ಲಿಯೇ ಎಲ್ಲ ವ್ಯವಹಾರಗಳನ್ನು ನಡೆಸುವ ನಮ್ಮ ಕರ್ನಾಟಕದಲ್ಲಿನ ಗ್ರಾಮದ ಹೆಸರೇನು?
2. ವಿಶಿಷ್ಟಾದ್ವೈತ ಮತದ ಸ್ಥಾಪಕರು ಯಾರು?
3. ಸೌರಮಂಡಲದ ಅತಿ ದೊಡ್ಡಗ್ರಹ ಯಾವುದು?
4. ಇಸ್ರೋದ ಕೇಂದ್ರ ಕಛೇರಿ ಎಲ್ಲಿದೆ?
5. ಸೊನ್ನೆಯನ್ನು ಕಂಡುಹಿಡಿದವರು ಯಾರು?

## ಜನವರಿ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ಸ್ವಾಮಿ ವಿವೇಕಾನಂದರು
2. ಹೊಯ್ಸಳರು
3. ಆಜಾದ್ ಹಿಂದ್ ಫೌಜ್
4. ದಂಡಕಾರಣ್ಯ
5. ಬೆಳವಡಿ ಮಲ್ಲಮ್ಮ

**ಜ್ಞಾನ–ವಿಜ್ಞಾನ – ಉತ್ತರಗಳು**

1. ನಾಡೋಜ ಶ್ರೀಮಹೇಶ್ ಜೋಶಿ
2. ಶ್ರೀ ಅನಿಲ್ ಕುಂಬ್ಳೆ
3. ಜನವರಿ 26
4. ಇಂಗಾಲದ ಡೈ ಆಕ್ಸೈಡ್
5. ಪೀನ ದರ್ಪಣ


# ವಿವಿಧೆಡೆಗಳಲ್ಲಿ ನಡೆದ ಸಂಕಲ್ಪ ದಿವಸ್ ಕಾರ್ಯಕ್ರಮ















ಕಲಬುರ್ಗಿ, ವಿಜಯಪುರ, ಬೀದರ್, ಬೆಳಗಾವಿ, ಬೆಂಗಳೂರು, ರಾಮನಗರದಲ್ಲಿ ಕರ್ತವ್ಯ ಬೋಧ ದಿವಸ್ ಕಾರ್ಯಕ್ರಮ ನಡೆಯಿತು.

# ವಿವಿಧೆಡೆಗಳಲ್ಲಿ ನಡೆದ ಫೋನ್ ಇನ್ ಕಾರ್ಯಕ್ರಮ









MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-02-2022 Date of Posting 20th or 21st of every month Posted at Periodical Rate

# ಕಲಬುರಗಿಯ ಪ್ರಶಿಕ್ಷಣ ವರ್ಗ – ಸತತ ಅಧ್ಯಯನದಿಂದ ಜ್ಞಾನ ವೃದ್ಧಿ




ಶಿಕ್ಷಕರು ಸತತ ಅಧ್ಯಯನದಲ್ಲಿ ತೊಡಗಿದಾಗಲೇ ಜ್ಞಾನ ವೃದ್ಧಿಯಾಗುತ್ತದೆ. ಇದಕ್ಕೆ ಪ್ರಶಿಕ್ಷಣ ವರ್ಗಗಳು ಪೂರಕ ಆಗಲಿವೆ ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ರಾಷ್ಟ್ರೀಯ ಉಪಾಧ್ಯಕ್ಷ ಡಾ॥ ಅಲ್ಲಮಪ್ರಭು ಗುಡ್ಡಾ ಹೇಳಿದರು.

ನಗರದ ಭೋಗೇಶ್ವರ ಪ್ರೌಢಶಾಲೆಯಲ್ಲಿ ರಾಷ್ಟ್ರೋತ್ಥಾನ ಪರಿಷತ್, ಪ್ರಶಿಕ್ಷಣ ಭಾರತಿ, ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಸಿದ್ಧಗಂಗಾ ಶಿಕ್ಷಣ ಮತ್ತು ಕಲ್ಯಾಣ ಟ್ರಸ್ಟ್‌ನಿಂದ ಭಾನುವಾರ ಏರ್ಪಡಿಸಿದ್ದ ಪ್ರಶಿಕ್ಷಣ ವರ್ಗದಲ್ಲಿ ಮಾತನಾಡಿ, ಭಾರತೀಯ ಸಂಸ್ಕೃತಿಯ ತಳಹದಿಯೊಂದಿಗೆ ಬೆಸೆಯುವಂಥ ಶಿಕ್ಷಕರನ್ನು ರೂಪಿಸುವ ಹಾಗೂ ಸುಸ್ಥಿರ ಸಮಾಜ ನಿರ್ಮಿಸುವ ಕಾರ್ಯ ಪ್ರಶಿಕ್ಷಣ ವರ್ಗ ಮಾಡಲಿದೆ ಎಂದು ಹೇಳಿದರು.

ಶಿಕ್ಷಕರು ತಮ್ಮ ಕ್ಷೇತ್ರದಲ್ಲಿ ಪ್ರವೀಣರಾಗಲು ಕೌಶಲ್ಯಾಭಿವೃದ್ಧಿ, ಭಾಷೆ ಮೇಲೆ ಪರಿಣಿತಿ ಹೊಂದಬೇಕು. ಶಾಲೆ ಹಾಗು ಮಾರ್ಗದರ್ಶಕರೊಂದಿಗೆ ಕೂಡಿ ಕೆಲಸ ಮಾಡಲು ಮತ್ತು ಶಿಕ್ಷಕರ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಬೇಕು. ವಿವಿಧ ರೀತಿಯ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರಶಿಕ್ಷಣವರ್ಗ ಸಹಕಾರಿ ಎಂದು ಹೇಳಿದರು.

ಪ್ರಶಿಕ್ಷಣ ಸಂಚಾಲಕ ಬಸವರಾಜ ಟಿ. ಎಸ್., ಕೆಆರ್‌ಎಂಎಸ್‌ಎಸ್ ವಿಭಾಗ ಪ್ರಮುಖ ಮಹೇಶ್ ಬಸರಕೋಡ, ಶಿಕ್ಷಣ ಮಂಡಲದ ಶಿವಶರಣ, ಸಂಜುಕುಮಾರ ಪಾಟೀಲ್, ಮಹಾಂತೇಶ, ಲಕ್ಷ್ಮೀಪುತ್ರ ರಾಂಪುರೆ ಇತರರಿದ್ದರು. ಅಣ್ಣಾರಾಯ ಬಿರಾದಾರ ನಿರೂಪಣೆ ಮಾಡಿದರು. ಚಂದ್ರಶೇಖರ ಪಾಟೀಲ್ ಸ್ವಾಗತಿಸಿದರು.

## ಭಾವಪೂರ್ಣ ಶ್ರದ್ಧಾಂಜಲಿ


ಮಳ್ಳೂರು ಆನಂದರಾಯರು


ಸಂಜೀವನಿ ರಾಯ್ಕರ್

## ಗಮನಿಸಿ

ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ

**akss1950@gmail.com**

ಇ–ಮೇಲ್‌ಗೆ ಕಳುಹಿಸಿಕೊಡಿ

### ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com